# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 157 Issue: 157 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 22.12.2024 • ಭಾನುವಾರ Sunday • ಪುಟ:04 Page:04 • ಬೆಲೆ:2 Rs:2



BOOK YOUR ADVERTISEMENTS TO REACH MORE READERS
1,00,000+ Digital E-PAPER READERS
M: 94486 33038
Book Advance Get More Benefits
No.1 HAMPI TIMES LEADING VIJAYANAGARA District News Paper


ಆನಂದ ಬಾಣ




ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಖಾಸಗಿ ವೈದ್ಯರಿಗೆ ಖಡಕ್ ಎಚ್ಚರಿಕೆ | ಆಸ್ಪತ್ರೆಗಳ ವರದಿಗೆ ಸೂಚನೆ

# ಹಣದಾಸೆಗೆ ಸಿಸೇರಿಯನ್ ಹೆರಿಗೆ ಸಲ್ಲದು

## ಸರ್ಕಾರಿ ಆಸ್ಪತ್ರೆಯಲ್ಲಿ ಶೇ.54 ರಷ್ಟು ನಾರ್ಮಲ್, ಶೇ.46 ರಷ್ಟು ಸಿಸೇರಿಯನ್ ಹೆರಿಗೆ

## ಖಾಸಗಿ ಆಸ್ಪತ್ರೆಯಲ್ಲಿ ಶೇ.17 ರಷ್ಟು ನಾರ್ಮಲ್, ಶೇ.83 ರಷ್ಟು ಸಿಸೇರಿಯನ್ ಹೆರಿಗೆ





**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯಲ್ಲಿ ವಾರ್ಷಿಕ ಸುಮಾರು 24000 ಹೆರಿಗೆಗಳಾಗುತ್ತಿದ್ದು, ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಯಲ್ಲಿ ತಲಾ ಶೇ.50ರ ಪ್ರಮಾಣದಲ್ಲಿ ಹೆರಿಗೆಯಾಗುತ್ತಿವೆ. ಸರ್ಕಾರಿ ಆಸ್ಪತ್ರೆಗಳಲ್ಲಿ ಹೆಚ್ಚು ಸಾಮಾನ್ಯ ಹೆರಿಗೆಗಳಾಗುತ್ತಿದ್ದರೆ, ಖಾಸಗಿ ಆಸ್ಪತ್ರೆಗಳಲ್ಲಿ ಸಾಮಾನ್ಯ ಹೆರಿಗೆಗಿಂತ ಹೆಚ್ಚು ಸಿಸೇರಿಯನ್ ಹೆರಿಗೆ ಆಗುತ್ತಿರುವುದು ಹಲವು ಅನುಮಾನಗಳಿಗೆ ಎಡೆಮಾಡಿದೆ. ಜಿಲ್ಲಾ ಆರೋಗ್ಯಾಧಿಕಾರಿಗಳು ಶೇ.75ಕ್ಕಿಂತ ಅಧಿಕ ಸಿಸೇರಿಯನ್ ಹೆರಿಗೆಯಾದ ಆಸ್ಪತ್ರೆಗಳಿಗೆ ಭೇಟಿ ನೀಡಿ ಪರಿಶೀಲಿಸಿ 15 ದಿನದೊಳಗೆ ವರದಿ ಸಲ್ಲಿಸಬೇಕು ಎಂದು ಖಡಕ್ ಸೂಚನೆ ನೀಡಿದರು.

ಜಿಲ್ಲಾ ಮತ್ತು ಆರೋಗ್ಯ ಇಲಾಖೆಯ ಸಭಾಂಗಣದಲ್ಲಿ ಶನಿವಾರ ನಡೆದ ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ಕುರಿತ ಜಿಲ್ಲಾ ಮಟ್ಟದ ಕಾರ್ಯಗಾರ ಉದ್ಘಾಟಿಸಿ ಮಾತನಾಡಿದರು. ಖಾಸಗಿ ಆಸ್ಪತ್ರೆಗಳಲ್ಲಿ ಸೀಜರಿನ್ ಪ್ರಮಾಣ ಶೇಕಡಾ 83 ರಷ್ಟಿದ್ದರೆ ಸರ್ಕಾರಿ ಆಸ್ಪತ್ರೆಗಳಲ್ಲಿ ಶೇಕಡಾ 46 ರಷ್ಟಿದ್ದು ಕೆಲವು ಖಾಸಗಿ ಆಸ್ಪತ್ರೆಗಳಲ್ಲಿ ಸಿಜರಿಯನ್ ಪ್ರಮಾಣ ಶೇಕಡಾ 100 ರಷ್ಟು ಕಂಡು ಬಂದಿರುತ್ತದೆ. ಗರ್ಭಿಣಿ ಮಹಿಳೆಯರಿಗೆ ಸಾಮಾನ್ಯ ಮತ್ತು ಸಿಸೇರಿಯನ್ ಹೆರಿಗೆಯಿಂದಾಗುವ ಅನುಕೂಲ ಹಾಗೂ ಅನಾನುಕೂಲಗಳ ಕುರಿತು ತಿಳುವಳಿಕೆ ನೀಡಬೇಕು. ಹಣದಾಸೆಗೆ ಅನಾವಶ್ಯಕವಾಗಿ ಸಿಸೇರಿಯನ್ ಮಾಡಿದರೆ ಕಾನೂನಿನಸಿ ಕ್ರಮ ಜರುಗಿಸಲಾಗುವುದು.

ಸಾಮಾನ್ಯ ಹೆರಿಗೆ ಸಾಧ್ಯವಿಲ್ಲದ ಅನಿವಾರ್ಯದ ಸಂದರ್ಭದಲ್ಲಿ ಮಾತ್ರ ಸಿಸೇರಿಯನ್ ಹೆರಿಗೆ ಮಾಡ ಬಹುದು. ಆದರೆ ಸಾಮಾನ್ಯ ಹೆರಿಗೆ ಆಗಲು ಅನುಸರಿಸ ಬೇಕಾದ ನಿಯಮಗಳನ್ನು ಗರ್ಭಿಣಿಯರಿಗೆ ವೈದ್ಯರು ತಿಳಿಸಬೇಕು. ಸಾಮಾನ್ಯ ಹೆರಿಗೆಯಾದಲ್ಲಿ ತಾಯಂದಿರು ತ್ವರಿತವಾಗಿ ಚೇತರಿಸಿಕೊಳ್ಳುತ್ತಾರೆ. ಆಸ್ಪತ್ರೆ ಯಲ್ಲಿ ದಾಖಲಾತಿಯ ಅವಧಿಯೂ ಕಡಿಮೆ. ರಕ್ತದ ನಷ್ಟವೂ ಆಗದು. ನಾನಾ ಸೋಂಕು ತಗಲದು. ಔಷಧಿಗಳ ಖರ್ಚು ತಗ್ಗಲಿದೆ. ತಾಯಿಯು ಮಗುವಿಗೆ ಬೇಗ ಹಾಲುಣಿಸಲು ಅನುವು ಮಾಡಿಕೊಡುತ್ತದೆ ಎಂಬುದನ್ನುಉ ಸೇರಿದಂತ ಅನುಕೂಲತೆಗಳನ್ನು ಗರ್ಭಿಣಿಗೆ ಆರಂಭದಿಂದಲೇ ತಿಳಿಹೇಳಿದರೆ, ಗರ್ಭಿಣಿ ಸಾವು ತಡೆಯುವುದರ ಜೊತೆ ತಾಯಿ ಮಗು ಆರೋಗ್ಯವಂತರಾಗಿರುವುದನ್ನು ಕಣ್ತುಂಬಿಕೊಳ್ಳಲು ಸಾಧ್ಯ ಎಂದರು.

ಡಿಎಚ್‌ಒ ಡಾ.ಎಲ್.ಅರ್.ಶಂಕರ್ ನಾಯ್ಕ್, ಜಿಲ್ಲಾ ಕುಟುಂಬ ಕಲ್ಯಾಣ ಅಧಿಕಾರಿ ಡಾ.ಜಂಬಯ್ಯ. ಬಿ. ಮತ್ತು ಖಾಸಗಿ ಆಸ್ಪತ್ರೆ ವೈದ್ಯರಾದ. ಡಾ ಹೇಮಾವತಿ. ಎಂ.ಟಿ.ಪಿ. ರಾಜ್ಯ ಸಂಯೋಜಕ. ದೊಡ್ಡನಗೌಡ. ವಿಷಯ ನಿರ್ವಾಹಕ. ಎಂ.ಧರ್ಮನಗೌಡ ಸೇರಿದಂತೆ ಜಿಲ್ಲೆಯ ಖಾಸಗಿ ಆಸ್ಪತ್ರೆ ಪ್ರಸೂತಿ ತಜ್ಞರು ಮತ್ತು ರೇಡಿಯಾಲಾಜಿಸ್ಟಿ ಇದ್ದರು.

ಮೈಕ್ರೋ ನ್ಯೂಸ್

## ಮಲಪನಗುಡಿ ಗ್ರಾಮದಲ್ಲಿ ಎನ್‌ಎಸ್‌ಎಸ್ ಶಿಬಿರ

**ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಪದವಿಪೂರ್ವ ಮಹಾವಿದ್ಯಾಲಯ ದಿಂದ ಡಿ.23 ರಿಂದ ಡಿ.29ರವರೆಗೆ ದತ್ತು ಗ್ರಾಮ ತಾಲೂಕಿನ ಮಲಪನಗುಡಿಯಲ್ಲಿ ಎನ್‌ಎಸ್‌ಎಸ್ ಸಂಕಲ್ಪ ವಾರ್ಷಿಕ ವಿಶೇಷ ಶಿಬಿರ ನಡೆಯಲಿದೆ ಎಂದು ಶಿಬಿರದ ಯೋಜನಾಧಿಕಾರಿ ಕೆ.ಶರಣಬಸವ ಹಸಮಕಲ್ ತಿಳಿಸಿದ್ದಾರೆ.

ಜೀವ ವಿರೋಧಿ ಹೆಣ್ಣು ಬ್ರೂಣ ಹತ್ಯೆ ನಿಲ್ಲಿಸಿ, ಲಿಂಗ ಸಮಾನತೆ ಸಾಧಿಸಿ ಶೀರ್ಷಿಕೆಯಡಿ ಶಿಬಿರ ಹಮ್ಮಿಕೊಳ್ಳಲಾಗಿದೆ. ಶ್ರೀ ಪರಮಪೂಜ್ಯ ವಿದ್ಯಾನಂದ ಭಾರತಿ ಸ್ವಾಮೀಜಿಗಳು ಸಾನ್ನಿಧ್ಯ ವಹಿಸುವರು. ವಿಜಯನಗರ ಕಾಲೇಜ್ ಅಡಳಿತ ಮಂಡಳಿ ಅಧ್ಯಕ್ಷ ಎನ್. ಮಲ್ಲಿಕಾರ್ಜುನ ಮೆಟ್ರಿ ಉದ್ಘಾಟಿಸಲಿದ್ದಾರೆ. ಪ್ರಾಚಾರ್ಯ ಕೆ.ಮಲ್ಲಿಕಾರ್ಜುನಗೌಡ ಅಧ್ಯಕ್ಷತೆವಹಿಸಲಿದ್ದಾರೆ. ವಿವಿಧ ವಿಷಯಗಳು ಕುರಿತು ಉಪನ್ಯಾಸಕರು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸ್ವಚ್ಛತಾ ಸೇವೆ ನಡೆಯಲಿದೆ ಎಂದು ತಿಳಿಸಿದ್ದಾರೆ.


Greetings, Obituary Ads Starts from Rs.1000
contact: 94486 33038


## ಸಿದ್ಧರಾಮ ಸಾಹಿತ್ಯ ಪ್ರಶಸ್ತಿಗೆ ಡಾ.ಡಿ.ವಿ. ಪರಮಶಿವಮೂರ್ತಿ ಆಯ್ಕೆ

**ಹಂಪಿ ಟೈಮ್ಸ್ ಹೊಸಪೇಟೆ**

ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಡಾ.ಡಿ.ವಿ. ಪರಮಶಿವಮೂರ್ತಿ ಅವರು ಸಿದ್ಧರಾಮ ಸಾಹಿತ್ಯ ಪ್ರಶಸ್ತಿಗೆ ಭಾಜನರಾಗಿದ್ದಾರೆ.



ಲಿಂ.ವೇ. ಸಿದ್ಧರಾಮಯ್ಯ ಮತ್ತು ಗಂಗಮ್ಮ ಸ್ಮಾರಕ ದತ್ತಿ ಅರಸಿಕೆರೆ ಇವರಿಂದ ಪ್ರದಾನವಾಗುವ ಸಿದ್ಧರಾಮ ಪ್ರಶಸ್ತಿಯನ್ನು 852ನೇ ಶ್ರೀ ಗುರು ಸಿದ್ಧರಾಮೇಶ್ವರ ಮಹೋತ್ಸವ ಸಮಿತಿಯಿಂದ ಆಯ್ಕೆ ಮಾಡಲಾಗಿರುತ್ತದೆ. 14ನೇ ಜನವರಿ 2025ರಂದು ಬೆಂಗಳೂರಿನ ಅರಮನೆ ಮೈದಾನದ ತ್ರಿಪುರವಾಸಿನಿ ಆವರಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ಕರ್ನಾಟಕ ರಾಜ್ಯ ನೊಳಂಬ ಲಿಂಗಾಯತ ಸಂಘದ ವತಿಯಿಂದ ಹಲವು ದಶಕಗಳಿಂದ ರಾಜ್ಯದ ವಿವಿಧ ಭಾಗಗಳಲ್ಲಿ ಶ್ರೀ ಗುರು ಸಿದ್ಧರಾಮೇಶ್ವರ ಜಯಂತಿ ಮಹೋತ್ಸವವನ್ನು ಆಚರಿಸಿಕೊಂಡು ಬರಲಾಗುತ್ತಿದೆ. ಪರಮಶಿವಮೂರ್ತಿ ಅವರು ಕನ್ನಡ ಶಾಸನಗಳ ಶಿಲ್ಪ : ಒಂದು ಅಧ್ಯಯನ ವಿಷಯದಲ್ಲಿ ಪಿಎಚ್.ಡಿ. ಪದವಿ ಪಡೆದ ನಂತರ ಶಾಸನಗಳ ಮೇಲೆ ವಿಶೇಷ ಆಸಕ್ತಿ ಬೆಳೆಸಿಕೊಂಡು ಬಳ್ಳಾರಿ, ಕೊಪ್ಪಳ, ರಾಯಚೂರು, ಬಾಗಲಕೋಟೆ, ಬಿಜಾಪುರ, ತುಮಕೂರು ಜಿಲ್ಲೆಯ ಶಾಸನಗಳನ್ನು ವಿಶೇಷವಾಗಿ ಅಧ್ಯಯನ ಮಾಡಿ ಪುಸ್ತಕಗಳನ್ನು ತಂದಿದ್ದಾರೆ. ಪ್ರೌಢ ದೇವರಾಯನ ಶಾಸನ ಸಂಪುಟ, ಕೃಷ್ಣದೇವರಾಯನ ಶಾಸನ ಸಂಪುಟ ಕೃತಿಗಳನ್ನು ಹೊರತಂದಿದ್ದಾರೆ. ವಿಶೇಷವಾಗಿ ನೊಳಂಬರ ಶಾಸನಗಳು ಕೃತಿಯನ್ನು 2019ರಲ್ಲಿ ಹೊರತಂದಿದ್ದಾರೆ. ನೊಳಂಬ ರಾಜರ ಶಾಸನಗಳ ಬಗ್ಗೆ ವಿಶೇಷ ಅಧ್ಯಯನ ಮಾಡಿ, ನೊಳಂಬರ ಆಳ್ವಿಕೆ ಬಗ್ಗೆ ವಿವರವಾದ ಪ್ರಕಟಣೆಗಳನ್ನು ತಂದು ನಾಡಿನ ಜನತೆಗೆ ಬೆಳಕು ಚೆಲ್ಲಿರುವ ಡಾ.ಡಿ.ವಿ.ಪರಮಶಿವಮೂರ್ತಿಯವರ ಸಾಧನೆಯನ್ನು ನೊಳಂಬ ಲಿಂಗಾಯತ ಸಂಘವು ಧನ್ಯತೆಯಿಂದ ಸ್ಮರಿಸಿಕೊಳ್ಳುತ್ತಿದೆ. ಕನ್ನಡ ಶಾಸನ ಶಿಲ್ಪ, ಶಾಸನ ಸಂಶೋಧನೆ, ಕೃಷ್ಣನದಿ ಮುಳುಗಡೆ ಶಾಸನಗಳು, ಹೀಗೆ ಶಾಸನಗಳ ಕುರಿತು ಆಳವಾದ ಅಧ್ಯಯನವನ್ನು ಡಾ.ಡಿ.ವಿ. ಪರಮಶಿವಮೂರ್ತಿಯವರು ನಡೆಸಿದ್ದಾರೆ.

## ಡಿ.24 ರಂದು ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿ, ಕಲೋತ್ಸವ

### ಡಿಡಿಪಿಐ ವೆಂಕಟೇಶ ರಾಮಚಂದ್ರಪ್ಪ ಹೇಳಿಕೆ

**ಹಂಪಿ ಟೈಮ್ಸ್ ಹೊಸಪೇಟೆ**

2024–25ನೇ ಸಾಲಿನ ವಿಜಯನಗರ ಜಿಲ್ಲಾ ಮಟ್ಟದ ಪ್ರತಿಭಾಕಾರಂಜಿ ಮತ್ತು ಕಲೋತ್ಸವ ಕಾರ್ಯಕ್ರಮವನ್ನು ಹೊಸಪೇಟೆಯ ವಿಜ್ಞಾನ–ಇಟೆಕ್ನೋ ಸ್ಕೂಲ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ವೆಂಕಟೇಶ ರಾಮಚಂದ್ರಪ್ಪ ತಿಳಿಸಿದ್ದಾರೆ.

ಜಿಲ್ಲಾಡಳಿತ, ಜಿಪಂ ಹಾಗೂ ಶಾಲಾ ಶಿಕ್ಷಣ ಇಲಾಖೆಯಿಂದ ಹಮ್ಮಿಕೊಂಡಿರುವ ಜಿಲ್ಲಾ ಮಟ್ಟದ ಪ್ರತಿಭಾ ಕಾರಂಜಿ ಮತ್ತು ಕಲೋತ್ಸವನ್ನು ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಜೆಡ್.ಜಮೀರ್ ಅಹ್ಮದ್ ಖಾನ್ ಉದ್ಘಾಟಿಸ ಲಿದ್ದಾರೆ. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಾದ ಎಸ್.ಮಧುಬಂಗಾರಪ್ಪ ಘನಉಪಸ್ಥಿತಿ ಹಾಗೂ ಶಾಸಕರಾದ ಹೆಚ್.ಆರ್.ಗವಿಯಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಹೊಸಪೇಟೆ ನಗರಸಭೆ ಅಧ್ಯಕ್ಷ ರೂಪೇಶ್ ಕುಮಾರ್. ಎನ್, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್. ಎನ್.ಎಫ್.ಇಮಾಮ್ ನಿಯಾಜಿ ಆಗಮಿಸಲಿದ್ದಾರೆ. ವಿಶೇಷ ಅಹ್ವಾನಿತರಾಗಿ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಆಗಮಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಈ ವೇಳೆ ಶಾಲಾ ಶಿಕ್ಷಣ ಹಾಗೂ ತರಬೇತಿ ಸಂಸ್ಥೆಯ ಉಪನಿರ್ದೇಶಕ ಓ.ಆರ್.ಪ್ರಕಾಶ್ ಇದ್ದರು.


ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ HAMPI TIMES

BOOK YOUR ADVERTISEMENTS TO REACH MORE READERS

Classified Advertisements
Examples: Job postings, Real estate listings, Matrimonial ads, Lost and found, Services (e.g., tutors, plumbers)

Display Advertisements
Examples: Brand promotions, Product launches, Corporate announcements

Public Notices and Announcements
Examples: Tender notices, Government announcements, Legal notices, Obituaries

Recruitment Advertisements
Examples: Company job openings, Walk-in interviews, Recruitment drives

Health and Wellness Advertisements
Examples: Hospitals or clinics, Medical equipment, Health supplements

Educational Advertisements
Examples: College admissions, Coaching center promotions, Training programs

Event Advertisements
Examples: Cultural programs, Exhibitions, Concerts or festivals

Retail Advertisements
Examples: Sales or discounts, New store openings

Entertainment Advertisements
Examples: Movie releases, TV show promotions, Theater events

Political Advertisements
Campaigns or announcements related to political parties or candidates.

Real Estate Advertisements
Ads for buying, selling, or renting property.

Matrimonial Advertisements
Personal ads for seeking marriage alliances. Examples: Bride or groom profiles, Community-specific ads

Product Advertisements
Examples: Electronics, Automobiles, FMCG products

contact for more information
M: 94 48 63 30 38
Email:- hampitimes@gmail.com


# ಆಕ್ಷನ್ ಟೆಸಾ ಉತ್ಪನ್ನಗಳು ದೀರ್ಘ ಬಾಳಿಕೆಗೆ ಹೆಸರಾಗಿವೆ

## ಕರ್ನಾಟಕ ಮ್ಯಾನೇಜರ್ ಯೋಗೇಶ್ ಮೊಗೇರ ಹೇಳಿಕೆ | ಆಕ್ಷನ್ ಟೆಸಾ ಮೀಟ್– ಟೆಸಾ ಸಲಾಂ ಅಭಿಯಾನಕ್ಕೆ ಚಾಲನೆ






**ಹಂಪಿ ಟೈಮ್ಸ್ ಹೊಸಪೇಟೆ**

ಆಕ್ಷನ್ ಟೆಸಾ ಕಂಪನಿಯ ಗೃಹಯಪಯೋಗಿ ವಸ್ತುಗಳು ಗುಣಮಟ್ಟ ಹಾಗೂ ದೀರ್ಘಾವಧಿಗೆ ಬಾಳಿಕೆ ಬಳಕೆಗೆ ಹೆಸರಾಗಿ, ಜನರಿಂದ ಮೆಚ್ಚುಗೆ ಪಡೆದಿವೆ ಎಂದು ಕಂಪನಿಯ ಕರ್ನಾಟಕ ಮ್ಯಾನೇಜರ್ ಯೋಗೇಶ್ ಮೊಗೇರ ಹೇಳಿದರು.

ನಗರದ ಹೋಟೆಲ್ ಮಲ್ಲಿಗೆ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಆಕ್ಷನ್ ಟೆಸಾ ಮೀಟ್ ಟೆಸಾ ಸಲಾಂ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು. ವೈಜ್ಞಾನಿಕ ಸಂಶೋಧನೆ ಮತ್ತು ಆಧುನಿಕ ತಂತ್ರಜ್ಞಾನದೊಂದಿಗೆ ಗೃಹ ಹಾಗೂ ಕಚೇರಿ ಉಪಯೋಗಿ ವಸ್ತುಗಳನ್ನು ಕಂಪನಿ ತಯಾರಿಸುತ್ತಿದೆ. ಆಕರ್ಷಕ ಡೋರ್‌ಗಳು, ವಾಟರ್ ಫ್ರೂಫ್ ಬೋರ್ಡ್ಸ್ ಸೇರಿದಂತೆ ಅನೇಕ ಉತ್ಪನ್ನಗಳು ಮಾರುಕಟ್ಟೆಯಲ್ಲಿ ಬೇಡಿಕೆ ಪಡೆದಿವೆ. ದೇಶದಲ್ಲೆ ಉತ್ತಮ ಹೆಸರು ಮಾಡಿರುವ ಟೆಸಾ ಉತ್ಪನ್ನಗಳನ್ನು ಬಳಕೆಗೆ ಮುಂದಾಗಬೇಕು ಎಂದರು.

ಟೆಸಾ ಉತ್ಪನ್ನಗಳ ಡಿಸ್ಟ್ರಿಬ್ಯೂಟರ್ ಮೇ. ರಾಘವೇಂದ್ರ ಗ್ಲಾಸ್ ಮತ್ತು ಪ್ಲೈವುಡ್ಸ್‌ನ ಮಾಲೀಕರಾದ ಆನಂದ ಉಪಸ್ಥಿತರಿದ್ದರು.

ಸಭೆಯಲ್ಲಿ ಪಾಲ್ಗೊಂಡಿದ್ದ ಅನೇಕ ಕಾರ್ಪೆಂಟ ರ್‌ಗಳು ಸಂಸ್ಥೆಯ ಎಲ್ಲಾ ಉತ್ಪನ್ನಗಳ ಬಗ್ಗೆ ಮಾಹಿತಿ ಪಡೆದರು. ಸಂಸ್ಥೆವತಿಯಿಂದ ಸಲಾಂ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ವಿಜೇತ ಕಾರ್ಪೆಂಟರ್‌ಗಳಿಗೆ ಉಡುಗರೆ ನೀಡಲಾಯಿತು. ವಿಶೇಷ ಅಭಿಯಾನದಡಿ ವಿತರಕರನ್ನು ಸನ್ಮಾನಿಸಿದರು. ಹೊಸಪೇಟೆಯ ಉದ್ಯಮಿಗಳು ಹಾಗೂ ಸಂಸ್ಥೆಯ ಪ್ರತಿನಿಧಿಗಳಾದ ವಿನೋದ್ ಕುಮಾರ್, ಎಕ್ಸಿಕ್ಯೂಟಿವ್‌ಗಳಾದ ಈಶ್ವರ್ ಎಸ್.ಬಿ., ರತುಲ, ಮಂಜುನಾಥ, ನರಸಿಂಹ ಹಾಗೂ ದೇವ ಇತರರಿದ್ದರು.

## ಸ್ಟುಡೆಂಟ್ ಕಾಲಂ

### ಮುದ್ದಾದ ಕುಟುಂಬದ ಕಥೆ



ಒಂದು ಊರಲ್ಲಿ ಒಂದು ಮುದ್ದಾದ ಕುಟುಂಬ ವಾಸಿಸುತ್ತಿತ್ತು. ಆ ಕುಟುಂಬದಲ್ಲಿ ಗಂಡ, ಹೆಂಡತಿ ಮತ್ತು ಅವರ ಮುದ್ದಾದ ಮಗಳು ಸೃಷ್ಟಿ ವಾಸವಾಗಿದ್ದರು. ಸೃಷ್ಟಿ ಆ ಸಮಯದಲ್ಲಿ 6 ವರ್ಷದ ಬಾಲಕಿಯಾಗಿದ್ದಳು. ಒಂದು ದಿನ, ಸೃಷ್ಟಿಯ ತಾಯಿಗೆ ಗಂಭೀರ ಕಾಯಿಲೆ ಬಂದು, ಅನಾರೋಗ್ಯದಿಂದ ಅವಳು ಸಾವಿಗೀಡಾದಳು. ಈ ಘಟನೆ ನಂತರ, ಸೃಷ್ಟಿಯ ತಂದೆ ಇನ್ನೊಬ್ಬ ಮಹಿಳೆಯನ್ನು ಮದುವೆ ಮಾಡಿಕೊಂಡರು. ಕೆಲವು ದಿನಗಳ ನಂತರ, ಆ ಮಲತಾಯಿಗೆ ಹೆಣ್ಣುಮಗು ಹುಟ್ಟಿತು. ಆ ಮಗುವಿಗೆ "ತನು" ಎಂದು ಹೆಸರು ಇಡಲಾಯಿತು. ಪ್ರಾರಂಭದಲ್ಲಿ ಮಲತಾಯಿ ಸೃಷ್ಟಿಯನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು. ಆದರೆ, ತನ್ನ ಮಗಳಿಗೆ ಹೆಚ್ಚಿನ ಪ್ರೀತಿಯುಳ್ಳ ಮಲತಾಯಿ, ಕಾಲಕ್ರಮೇಣ ಸೃಷ್ಟಿಗೆ ಬೇಧಭಾವ ತೋರಿಸಲು ಆರಂಭಿಸಿದಳು. ಅವಳನ್ನು ಶಾಲೆಯಿಂದ ಬಿಟ್ಟುಕೊಡಿಸಿ, ಎಲ್ಲಾ ಮನೆ ಕೆಲಸಗಳನ್ನು ಮಾಡಿಸಲು ಆರಂಭಿಸಿದಳು. ಸೃಷ್ಟಿ ದಿನನಿತ್ಯ 12 ಕಿ.ಮೀ ದೂರದ ಬಾವಿಯಿಂದ ನೀರನ್ನು ತಂದು ಕೊಳ್ಳುತ್ತಿದ್ದು, ಹಿಂಸೆಯನ್ನು ಸಹಿಸಬೇಕಾಗುತ್ತಿತ್ತು.

ಒಂದು ಬಿಸಿಲಿನ ದಿನ, ನೀರನ್ನು ತರುವ ದಾರಿಯಲ್ಲಿ ಸೃಷ್ಟಿ ಒಂದು ಮಾವಿನ ಮರವನ್ನು ನೋಡಿದಳು. ಆ ಮರವು ಅವಳಿಗೆ "ನನ್ನ ಒಣಗಿದ ಎಲೆಗಳನ್ನು ಕಿತ್ತು ಹಾಕು" ಎಂದು ಸಹಾಯ ಕೇಳಿತು. ಸೃಷ್ಟಿ ಯೋಚಿಸಿದೆ ಮರಕ್ಕೆ ಸಹಾಯ ಮಾಡಿದಳು. ಮುಂದೆ ಹೋಗಿದಾಗ, ಬಿಸಿಲಿನಲ್ಲಿ ಬಿದ್ದಿದ್ದ ಒಂದು ಬ್ರೆಡ್ ಸಹಾಯ ಕೇಳಿತು: "ನನ್ನನ್ನು ನೆರಳಿನಲ್ಲಿ ಬಿಟ್ಟುಬಿಡು." ಸೃಷ್ಟಿ ಇದಕ್ಕೂ ಸಹಾಯ ಮಾಡಿದಳು. ಇನ್ನಷ್ಟು ಮುಂದುವರಿದಾಗ, ಪಾದಕ್ಕೆ ಗಾಯವಾದ ಒಂದು ನಾಯಿಮರಿಯು ಸಹಾಯ ಕೇಳಿತು. ಸೃಷ್ಟಿ ಅದರ ಗಾಯಕ್ಕೆ ಔಷಧ ಹಾಕಿ, ನೀರು ಕುಡಿಸಿ, ಸುರಕ್ಷಿತ ಸ್ಥಳಕ್ಕೆ ತಂದು ಬಿಟ್ಟಳು. ಬಾವಿಯಲ್ಲಿ ನೀರು ತುಂಬಿ, ಮನೆಗೆ ಹಿಂದಿರುಗುವಾಗ, ಆ ನಾಯಿ ಮರಿಯು ಸೃಷ್ಟಿಗೆ ಬಂಗಾರದ ಉಂಗುರ ಕೊಟ್ಟಿತು. ಮುಂದೆ ಬ್ರೆಡ್ ಆಕೆಗೆ ವಜ್ರ ಹಾಗೂ ವೈಡೂರ್ಯದ ಆಭರಣಗಳನ್ನು ನೀಡಿತು. ನಂತರ, ಮಾವಿನ ಮರ ಆಕೆಯನ್ನು ಸುಂದರವಾಗಿ ಉಡುಗೆ ತೊಡಿಸಿತು, ಬಂಗಾರದ ಬಟ್ಟೆ, ಚಪ್ಪಲಿಗಳು ಮತ್ತು ಆಭರಣಗಳನ್ನು ಕೊಟ್ಟಿತು. ಸೃಷ್ಟಿ ಈ ಎಲ್ಲಾ ವರಗಳೊಂದಿಗೆ ಸಂತೋಷದಿಂದ ಮನೆಗೆ ಹೋದಳು.

ಮಲತಾಯಿ ಮತ್ತು ತನು ಈ ಘಟನೆಗಳನ್ನು ಕೇಳಿ ಲಾಭಕಾಂಕ್ಷೆಯಿಂದ ತನುಗೆ ಸಹ ಇದೇ ಅನುಭವ ತರಲು ತಾಯಿ ಸೂಚಿಸಿದಳು. ತನು ಮಾವಿನ ಮರ, ಬ್ರೆಡ್, ಮತ್ತು ನಾಯಿಮರಿಯ ಬಳಿ ಸಹಾಯ ಕೇಳಿದಾಗ, ಅವಳು ಏನೂ ಮಾಡಲು ನಿರಾಕರಿಸಿದಳು. ಆಗ ಅವು ಆಕೆಯನ್ನು ದಂಡಿಸಿದವು. ತನು ಮನೆಯತ್ತ ದಯನೀಯ ಸ್ಥಿತಿಯಲ್ಲಿ ಹಿಂದಿರುಗಿದಳು. ಈ ಘಟನೆಗಳು ಮಲತಾಯಿ ಮತ್ತು ತನುಗೆ ತಮ್ಮ ತಪ್ಪುಗಳ ಅರಿವು ಮೂಡಿಸಿತು. ಅವರ ವರ್ತನೆ ಬದಲಾಯಿತು ಮತ್ತು ಸೃಷ್ಟಿಗೆ ಅವರು ಪ್ರೀತಿ ಮತ್ತು ಗೌರವವನ್ನು ನೀಡಲು ಪ್ರಾರಂಭಿಸಿದರು. ಸೃಷ್ಟಿ ಒಬ್ಬ ಸುಂದರ ರಾಜಕುಮಾರನೊಂದಿಗೆ ಮದುವೆಯಾಗಿ, ಆಕೆ ಸದಾ ಸುಖಸಂತೋಷ ದಿಂದ ಬಾಳಿದಳು.

– ಸೌಮ್ಯ. 9 ನೇತರಗತಿ.
ಸರ್ಕಾರಿ ಪ್ರೌಢಶಾಲೆ ಗದ್ದಿಕೆರಿ. ತಾ॥ ಹ.ಬೊ ಹಳ್ಳಿ

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

### ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

–: ಸಂಪಾದಕರು :–
ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

– ಜಾಹೀರಾತು ವ್ಯವಸ್ಥಾಪಕರು.

ಇಂದು ಭಾರತ ಕಂಡ ಸರ್ವಶ್ರೇಷ್ಠ ಗಣಿತಜ್ಞ ರಾಮಾನುಜನ್ ಜನ್ಮದಿನ । ರಾಷ್ಟ್ರೀಯ ಗಣಿತ ದಿನ

# ಬದುಕಿನ ಲೆಕ್ಕಾಚಾರವೇ ಗಣಿತ

ಪ್ರತಿ ವರ್ಷ ಡಿಸೆಂಬರ್–22ನ್ನು ರಾಷ್ಟ್ರೀಯ ಗಣಿತ ದಿನವನ್ನಾಗಿ ದೇಶಾದ್ಯಂತ ಆಚರಿಸಲಾಗುತ್ತದೆ. ಈ ವರ್ಷದ ಈ ದಿನವು ಗಣಿತ ಶಾಸ್ತ್ರದ ಪ್ರತಿಭೆ ಶ್ರೀನಿವಾಸ ರಾಮಾನುಜನ್ ಅವರ 137 ನೇ ಜನ್ಮ ದಿನದ ವಾರ್ಷಿಕೋತ್ಸವವನ್ನು ನೆನಪಿಸುತ್ತದೆ. ಗಣಿತದ ಪ್ರತಿಭೆ ಶ್ರೀನಿವಾಸ ರಾಮಾನುಜನ್ ಅವರನ್ನು ಗೌರವಿಸಲು, ವಿದ್ಯಾರ್ಥಿಗಳಲ್ಲಿ ಗಣಿತದ ಅಧ್ಯಯನವನ್ನು ಉತ್ತೇಜಿಸಲು, ತಂತ್ರಜ್ಞಾನ, ಎಂಜಿನಿಯರಿಂಗ್, ಅರ್ಥಶಾಸ್ತ್ರ ಮತ್ತು ಆರೋಗ್ಯ ರಕ್ಷಣೆಯಂತಹ ವಿವಿಧ ಕ್ಷೇತ್ರಗಳಿಗೆ ಗಣಿತವು ಹೇಗೆ ಅವಿಭಾಜ್ಯವಾಗಿದೆ ಎಂಬುದನ್ನು ಎತ್ತಿ ತೋರಿಸಲು, ಗಣಿತದ ಮೂಲಕ ವಿಮರ್ಶಾತ್ಮಕ ಚಿಂತನೆ ಮತ್ತು ವಿಶ್ಲೇಷಣಾತ್ಮಕ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ಈ ದಿನವನ್ನು ಆಚರಿಸಲಾಗುತ್ತದೆ. ರಾಮಾನುಜನ್ ಅವರ ಕೊಡುಗೆಗಳು ವಿಶ್ವದಾದ್ಯಂತ ಗಣಿತದ ಮೇಲೆ ಗಮನಾರ್ಹವಾಗಿ ಪ್ರಭಾವ ಬೀರಿವೆ. ಪ್ರತಿ ವರ್ಷ ಒಂದು ನಿರ್ದಿಷ್ಟ ಥೀಮ್‌ನೊಂದಿಗೆ ಆಚರಿಸಲಾಗುವ ಈ ದಿನವನ್ನು ಈ ವರ್ಷ 'ಗಣಿತ:ನಾವೀನ್ಯತೆ ಮತ್ತು ಪ್ರಗತಿಗೆ ಸೇತುವೆ' ಎಂಬ ಥೀಮ್‌ನೊಂದಿಗೆ ಆಚರಿಸಲಾಗುತ್ತದೆ. ಗಣಿತದ ತತ್ವಗಳು ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆಗಳಲ್ಲಿನ ಪ್ರಗತಿಯನ್ನು ಹೇಗೆ ಬೆಂಬಲಿಸುತ್ತದೆ ಎಂಬುದನ್ನು ಒತ್ತಿ ಹೇಳುತ್ತದೆ. ಗಣಿತ ಶಾಸ್ತ್ರವು ಕಂಪ್ಯೂಟರ್ ವಿಜ್ಞಾನ, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ವಿಶ್ಲೇಷಣೆಯ ಅಡಿಪಾಯವಾಗಿದೆ. ಇದು ಇಂಜಿನಿಯರ್‌ಗಳು ಮತ್ತು ವಿಜ್ಞಾನಿಗಳಿಗೆ ಜ್ಞಾನವನ್ನು ಸಂಘಟಿಸಲು ಮತ್ತು ರಚನೆ ಮಾಡಲು ಅನುಮತಿಸುತ್ತದೆ. ಗಣಿತದ ಮಾದರಿಯು ರೋಗಗಳನ್ನು ಅರ್ಥ ಮಾಡಿಕೊಳ್ಳಲು, ಹೊಸ ಚಿಕಿತ್ಸೆಯನ್ನು ಅಭಿವೃದ್ಧಿಪಡಿಸಲು ನಮಗೆ ಸಹಾಯ ಮಾಡುತ್ತದೆ. ಗಣಿತ ಆಧರಿಸಿದ ಅಂಕಿ ಅಂಶಗಳ ಮಾದರಿಗಳು ಹವಾಮಾನ ಬದಲಾವ`ಣೆಯನ್ನು ಊಹಿಸಲು ಮತ್ತು ಸಂರಕ್ಷಣೆಯ ಪ್ರಯತ್ನಗಳನ್ನು ತಿಳಿಸಲು ಸಹಾಯ ಮಾಡುತ್ತದೆ. ಉಪಗ್ರಹ ಸಂವಹನ ಮತ್ತು ಕಕ್ಷೆಯ ಪಥಗಳಿಗೆ ನಿಖರವಾದ ಲೆಕ್ಕಾಚಾರ ಗಳನ್ನು ಸಕ್ರಿಯಗೊಳಿಸುತ್ತದೆ. ಇದು ಜಿಪಿಎಸ್ ಮತ್ತು ಬಾಹ್ಯಾಕಾಶ ಪರಿಶೋಧನೆಗೆ ಕೊಡುಗೆ ನೀಡುತ್ತದೆ. ಗಣಿತದ ಕೆಲವು ಮಾಡೆಲಿಂಗ್ ಗಾಳಿ ಟರ್ಬೈನ್‌ಗಳು, ಸೌರ ಫಲಕಗಳು ಮತ್ತು ಶಕ್ತಿ ಗ್ರಿಡ್‌ಗಳ ದಕ್ಷತೆಯನ್ನು ಉತ್ತಮಗೊಳಿಸಲು ಸಹಾಯ ಮಾಡುತ್ತದೆ. ಹೀಗೆ ಪಟ್ಟಿ ಮಾಡುತ್ತಾ ಹೋದರೆ ಅದಕ್ಕೆ ಕೊನೆ ಎಂಬುದೇ ಇಲ್ಲ, ಅಂದರೆ ಗಣಿತದ ಪ್ರಭಾವವಿಲ್ಲದ ಯಾವುದೇ ಕ್ಷೇತ್ರವಿಲ್ಲವೆಂದು ಹೇಳಬಹುದು. ಗಣಿತ ವೆಂದರೆ ಕೇವಲ ನಾಲ್ಕು ಗೋಡೆಗಳ



ರಾಜು. ಭೂಶೆಟ್ಟಿ
ಲೇಖಕರು, ಹುಬ್ಬಳ್ಳಿ

Scan For Digital Colourful
HAMPI TIMES E-paper



ಮಧ್ಯೆ ಪುಸ್ತಕದಲ್ಲಿರುವ ಸಮಸ್ಯೆಗಳನ್ನು ಬಿಡಿಸುವುದು, ಅಂಕ ಗಳಿಸುವುದಷ್ಟೇ ಅಲ್ಲ. ಕಲಿತಿದ್ದನ್ನು ನಿತ್ಯ ಜೀವನಕ್ಕೆ ಅನ್ವಯಿಸಿಕೊಳ್ಳುವ ಜ್ಞಾನವನ್ನು ಮಕ್ಕಳು ಬೆಳೆಸಿಕೊಳ್ಳಬೇಕು. ಅಂದಾಗ ಮಾತ್ರ ಗಣಿತವೆಂದರೆ ಭಯದ ಬದಲು ಭರವಸೆ ಮೂಡುತ್ತದೆ ಹಾಗೂ ಕಬ್ಬಿಣದ ಕಡಲೆ ಎಂಬುದರ ಬದಲು ಕಬ್ಬಿನ ರಸವಾಗುತ್ತದೆ.

ಬಡತನವನ್ನೇ ಸಾಧನೆಯ ಮೆಟ್ಟಿಲುಗಳಾಗಿಸಿದ ಮಹಾನ್ ಗಣಿತಜ್ಞ ಗಣಿತ ಪ್ರಪಂಚದಲ್ಲಿ ಜಗತ್ತನ್ನೇ ಬೆರಗಾಗಿಸಿದ್ದ, ಭಾರತ ಕಂಡ ಸರ್ವಶ್ರೇಷ್ಠ ಗಣಿತಜ್ಞ ರಾಮಾನುಜನ್ ಅವರು ಅತ್ಯಂತ ಬಡ ಕುಟುಂಬದಲ್ಲಿ 1887ರ ಡಿಸೆಂಬರ್ 22 ರಂದು ತಮಿಳುನಾಡಿನ ಈರೋಡ್‌ನಲ್ಲಿ ಜನಿಸಿದರು. ಮನೆಯಲ್ಲಿ ಕಡು ಬಡತನವಿದ್ದುದರಿಂದ ಸರಿಯಾಗಿ ಊಟವೂ ದೊರೆಯುತ್ತಿರಲಿಲ್ಲ. ಇವರ ತಂದೆಯವರು ಬಟ್ಟೆಯ ಅಂಗಡಿಯಲ್ಲಿ ಲೆಕ್ಕ ಬರೆದು ಸಂಪಾದಿಸುತ್ತಿದ್ದ ಮಾಸಿಕ ಕೇವಲ 20 ರೂ.ಗಳಲ್ಲಿ ಜೀವನ ನಡೆಸಬೇಕಾಗಿತ್ತು. ಇಂತಹ ಕಠಿಣ ಪರಿಸ್ಥಿತಿಯಲ್ಲಿಯೂ ಕೂಡ ತನ್ನ ಛಲವನ್ನು ಬಿಡದೇ ಮುನ್ನುಗ್ಗುತ್ತಿದ್ದ ಅವರ ಗುಣ ಮಾತ್ರ ಇಂದಿನ ಯುವಕರಿಗೆ ಆದರ್ಶಪ್ರಾಯವಾಗಿದೆ. ರಾಮಾನುಜನ್ ಅವರ ಗಣಿತ ಸಾಮರ್ಥ್ಯ ಎಷ್ಟಿತ್ತೆಂದರೆ ತಮಗೆ ಯಾರಾದರೂ ಗಣಿತದ ಯಾವುದಾದರೂ ಶಾಖೆಗಳ ಕೆಲವು ಅಂಶಗಳನ್ನು ಹೇಳಿದರೆ ಸಾಕು, ಅದನ್ನೆಲ್ಲಾ ಸಂಪೂರ್ಣವಾಗಿ ಗ್ರಹಿಸಿ ಮತ್ತೊಂದಿಷ್ಟು ಹೊಸದನ್ನು ಅದಕ್ಕೆ ಸೇರಿಸುತ್ತಿದ್ದರು. 1903ರಲ್ಲಿ ಸಿನಾಪ್ಸಿಸ್ ಆಫ್ ಪ್ಯೂರ್ ಮ್ಯಾಥೆಮ್ಯಾಟಿಕ್ಸ ಎಂಬ ಪುಸ್ತಕ ಪಡೆದು, ಅದರಲ್ಲಿನ ಪ್ರಮೇಯಗಳಿಗೆ ಸಾಧನೆಗಳನ್ನು ಸ್ವಂತವಾಗಿ ಸಂಶೋಧಿಸಿಕೊಳ್ಳುವ ಆಸಕ್ತಿಯನ್ನು ಬೆಳೆಸಿಕೊಂಡರು. ಇವರ ಗಣಿತದಲ್ಲಿನ ಕುತೂಹಲ, ಹೊಸ ಅನ್ವೇಷಣೆಗಳನ್ನು ಗುರುತಿಸಿದ ನಾರಾಯಣ ಅಯ್ಯರ್ ಎಂಬುವವರು ರಾಮಾನುಜನ್ ಅವರೊಡನೆ ಚರ್ಚಿಸಿ, ಕೇಂಬ್ರಿಜ್ ವಿಶ್ವವಿದ್ಯಾಲಯದ ಪ್ರೊಫೆಸರ್ ಹಾರ್ಡಿಯವರಿಗೆ ಪತ್ರ ಬರೆಯುವಂತೆ ಹೇಳಿದರು. ಇದಕ್ಕೆ ಒಪ್ಪಿಕೊಂಡ ರಾಮಾನುಜನ್ "ವಿಶ್ವವಿದ್ಯಾಲಯದ ಶಿಕ್ಷಣದ ಹಿನ್ನೆಲೆ ತನಗಿಲ್ಲವೆಂದೂ, ಅಪಸರಣ ಶ್ರೇಢಿಗಳ ಕ್ಷೇತ್ರದಲ್ಲಿ ವಿಶೇಷವಾದ ಸಂಶೋಧನೆ ಮಾಡಿರುವುದಾಗಿ, ಸುಮಾರು 120 ಫಲಿತಾಂಶಗಳನ್ನು, ಪ್ರಮೇಯಗಳನ್ನು ಕಳುಹಿಸಿರುವುದಾಗಿ ತಿಳಿಸಿದ್ದರು. ಆ ಪತ್ರಗಳೊಂದಿಗೆ ಅಡಕವಾಗಿರುವ ಪ್ರಮೇಯಗಳನ್ನು ವೀಕ್ಷಣೆ ಮಾಡಿ, ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಡಬೇಕೆಂದು ವಿನಂತಿಸಿದ್ದರು. ಕೇಂಬ್ರಿಜ್ ವಿಶ್ವವಿದ್ಯಾಲಯದಲ್ಲಿ ಶುದ್ಧ ಗಣಿತದಲ್ಲಿ ಮಹಾನ್ ಖ್ಯಾತಿಯನ್ನು ಗಳಿಸಿದ್ದ ಪ್ರೊ. ಹಾರ್ಡಿಯವರು ರಾಮಾನುಜನ್‌ರವರ ಪತ್ರದಲ್ಲಿದ್ದ ಪ್ರಮೇಯ ಹಾಗೂ ಸೂತ್ರಗಳ ಪಟ್ಟಿಯನ್ನು ನೋಡಿ ತೀವ್ರ ಆಶ್ಚರ್ಯಚಕಿತರಾದರು. ಇಂತಹ ಗಣಿತ ಸೂತ್ರಗಳನ್ನು ತಾನು ಹಿಂದೆಂದೂ ನೋಡಿಯೇ ಇರಲಿಲ್ಲವೆಂಬ ಅಭಿಪ್ರಾಯ ತಿಳಿಸುತ್ತಾ ಇಂತಹ ಅದ್ಭುತವಾದ ಸೂತ್ರಗಳನ್ನು ರಚಿಸಿರುವ ವ್ಯಕ್ತಿ ಪ್ರಥಮ ದರ್ಜೆಯ ಗಣಿತಜ್ಞನೇ ಆಗಿರಬೇಕೆಂಬ ನಿರ್ಣಯಕ್ಕೆ ಬಂದರು. ಹಾರ್ಡಿಯಂತಹ ಮಹಾನ್ ಗಣಿತಜ್ಞನೇ ಆ ಸೂತ್ರ ಹಾಗೂ ಪ್ರಮೇಯಗಳನ್ನು ಇಷ್ಟೊಂದು ಮೆಚ್ಚಿಕೊಂಡು ಪ್ರಶಂಸಿರುವುದನ್ನು ನೋಡಿದಾಗ ಗೊತ್ತಾಗತ್ತೆ ರಾಮಾನುಜನ್ ಅವರಲ್ಲಿದ್ದ ಗಣಿತದ ಪ್ರತಿಭೆ ಎಷ್ಟೊಂದು ಆಳವಾಗಿತ್ತೆಂಬುದನ್ನು ತೋರಿಸುತ್ತದೆ. ನಂತರ ಹಾರ್ಡಿಯವರು ರಾಮಾನುಜನ್ ಅವರಿಗೆ ಮರು ಉತ್ತರ ಬರೆದು, ಎಚ್.ಎಲ್.ನೆವಿಲ್ ಎನ್ನುವವರು ಉಪನ್ಯಾಸ ನೀಡಲು ಮದರಾಸಿಗೆ ಬಂದಿದ್ದು ಅವರನ್ನು ಭೆಟ್ಟಿಯಾಗಬೇಕೆಂದು ಹಾಗೂ ಅವರಿಂದ ಅತ್ಯುತ್ತಮ ಸಲಹೆ ದೊರೆಯುವುದಾಗಿಯೂ ತಿಳಿಸಿದರು. ಆ ಪ್ರಕಾರ ರಾಮಾನುಜನ್ ಅವರು ನೆವಿಲ್‌ರವರನ್ನು ಭೇಟಿಯಾಗಿ ಹಲವಾರು ಗಣಿತದ ವಿಷಯಗಳನ್ನು ಚರ್ಚಿಸಿದರು. ಇವರ ಗಣಿತದ ವಿದ್ವತ್ತನ್ನು ಪರೀಕ್ಷಿಸಿದ ಅವರು ಹಾರ್ಡಿಯವರ ಆದೇಶದ ಮೇರೆಗೆ ತಾವು ಉನ್ನತ ಅಧ್ಯಯನಕ್ಕಾಗಿ ಇಂಗ್ಲೆಂಡಿಗೆ ಬರುವಂತೆ ರಾಮಾನುಜನ್‌ರಿಗೆ ಆಹ್ವಾನ ನೀಡಿದರು. ಮೊದ ಮೊದಲು ನಿರಾಕರಿಸಿದರೂ ನಂತರ ಒಪ್ಪಿಕೊಂಡು ಇಂಗ್ಲೆಂಡಿಗೆ ತೆರಳಿದರು. ನಂತರ ಕೇಂಬ್ರಿಜ್‌ಗೆ ತೆರಳಿ ಹಾರ್ಡಿಯವರನ್ನು ಭೇಟಿಯಾದರು. ಹೀಗೆ ಹಾರ್ಡಿಯವರ ನಿರಂತರ ಮಾರ್ಗದರ್ಶನದಲ್ಲಿ ಮುಂದುವರೆದು 1917 ರಲ್ಲಿ ರಾಮಾನುಜನ್‌ರಿಗೆ ಅವರು ಕೆಲಸ ಮಾಡುತ್ತಿದ್ದ ಟ್ರಿನಿಟಿ ಕಾಲೇಜಿನ ಫೆಲೋ ಆಗಿ ಗೌರವ ಸಿಕ್ಕಿತು. 1928 ರಲ್ಲಿ ಫೆಲೋ ಆಫ್‌ದ ರಾಯಲ್ ಸೊಸೈಟಿ (ಎಫ್.ಆರ್.ಎಸ್) ಗೌರವ ಸಿಕ್ಕಿತು. ಸಾಧನೆಯ ಹಾದಿಯಲ್ಲಿ ಚಲಿಸುತ್ತಿದ್ದಾಗ ಕ್ಷಯರೋಗಕ್ಕೆ ತುತ್ತಾದರು. ಈ ಆಘಾತದಿಂದ ಹೊರಬರಲು ಸಾಧ್ಯವಾಗದೇ ಕೊನೆಗೆ ಮರಳಿ ಭಾರತದತ್ತ ಪ್ರಯಾಣ ಬೆಳೆಸಿದರು. ಮುಂದೆ 1920 ಏಪ್ರಿಲ್ 26 ರಂದು ತಮ್ಮ 32 ನೇ ವಯಸ್ಸಿನಲ್ಲಿ ತೀರಿಕೊಂಡರು. ಸಂಖ್ಯಾ ಸಿದ್ಧಾಂತ, ಅನಂತ ಸರಣಿ, ವಿಭಜನಾ ಸಿದ್ಧಾಂತ, ರಾಮಾನುಜನ್–ಹಾರ್ಡಿ ಸಂಖ್ಯೆ (1729) ಇನ್ನೂ ಮುಂತಾದವುಗಳು ಶ್ರೀನಿವಾಸ ರಾಮಾನುಜನ್ ಅವರ ಕೆಲವು ಪ್ರಮುಖವಾದ ಕೊಡುಗೆಗಳಾಗಿವೆ. ರಾಮಾನುಜನ್‌ರವರು ಬದುಕಿದ್ದು ಕೇವಲ 32 ವರ್ಷ ಆದರೆ ಅವರ ಸಾಧನೆ ಮಾತ್ರ ಯಾವತ್ತೂ ನಮ್ಮೊಂದಿಗೆ ಶಾಶ್ವತವಾಗಿರುತ್ತದೆ ಎಂದು ಹೇಳಬಹುದು.

## ಡಾ.ರಾಜಶೇಖರ ಜಮದಂಡಿ ಇವರ 'ಅಪ್ಪನ ಹೆಗಲು'

# ಅಪ್ಪ ಯಾಕೋ ಹಿಂದುಳಿದೇ ಬಿಟ್ಟ...

ಪ್ರತಿವರ್ಷ ಮೇ ತಿಂಗಳ ಎರಡನೇ ಭಾನುವಾರದಂದು ವಿಶ್ವತಾಯಂದಿರವನ್ನು ಆಚರಿಸಲಾಗುತ್ತಿದೆ, ಅದೇ ರೀತಿ ಜೂನ್ ಮೂರನೇ ಭಾನುವಾರದಂದು ವಿಶ್ವ ಅಪ್ಪಂದಿರ ದಿನದ ಆಚರಣೆಯೂ ನಡೆಯುತ್ತದೆ. ಈ ಆಚರಣೆಗಳು ಜಾರಿಗೆ ಬಂದಿರುವುದರ ಹಿಂದೆ ಎರಡು ಕಾರಣಗಳಿವೆ; ಮೊದಲನೆಯದಾಗಿ 1908ರ ಜುಲೈ 5ರಂದು ಪಶ್ಚಿಮ ವರ್ಜೀನೀಯದಲ್ಲಿ ನಡೆದ ಮೊನಾಂಗಾ ಗಣಿದುರಂತದಲ್ಲಿ ಸಾವಿಗೀಡಾದ ತಂದೆಯವರ ಸ್ಮರಣೆಗೆಂದು ಅಲ್ಲಿನ ಮಕ್ಕಳ ಮೂಲಕ ಆರಂಭಗೊಂಡಿದೆ. ನಂತರದಲ್ಲಿ ಅಮೆರಿಕಾದ ಸೊನೋರಾ ಎಂಬ ಮಹಿಳೆ ತನ್ನ ತಾಯಿಯ ಸಾವಿನ ನಂತರವೂ ತನ್ನೆಲ್ಲ ಮಕ್ಕಳನ್ನು ಪೋಷಿಸುವಲ್ಲಿ ತಂದೆ ಜಾಕ್ಸನ್ ಸ್ಮಾಟ್ ತೋರಿದ ಅಮೂಲ್ಯ ಕಾಳಜಿಗಳನ್ನು ಮನಗಂಡು ಅಪ್ಪಂದಿರ ದಿನಾಚರಣೆಯ ಬಗ್ಗೆ ಅಲ್ಲಿನ ಸಚಿವಾಲಯವನ್ನು ಸಂಪರ್ಕಿಸಿ, ಅನುಷ್ಠಾನಕ್ಕೆ ತರುವಲ್ಲಿ ಯಶಸ್ವಿಯಾಗುತ್ತಾಳೆ. ತಮ್ಮ ತಂದೆಯ ಜನ್ಮದಿನವಾದ ಜುಲೈ 5ರಂದು ಆಚರಿಸಲು ಕೋರುತ್ತಾಳೆ. ಕೊನೆಗೆ ಜೂನ್ ತಿಂಗಳ ಮೂರನೇ ಭಾನುವಾರದಂದು ಈ ದಿನವನ್ನು ಆಚರಿಸುವ ಪರಂಪರೆ ಐರೋಪ್ಯ ರಾಷ್ಟ್ರಗಳಲ್ಲಿ ಮೇಲ್ಮೆಗೆ ಬಂತು.


ಭಾರತೀಯರಲ್ಲಿಕುಟುಂಬಜೀವನಪದ್ಧತಿಗಳಿರುವುದರಿಂದಲೋ ಏನೋ ಅಮ್ಮನಿಗೂ, ಅಪ್ಪನಿಗೂ ಈ ಆಚರಣೆಗಳನ್ನು ಮಾಡಬೇಕೆಂಬ ಆಲೋಚನೆ ಮಕ್ಕಳಲ್ಲಿ ದೇಶದಾದ್ಯಂತ ಅಷ್ಟಾಗಿ ಬಂದಂತೆ ತೋರುವುದಿಲ್ಲ. ಆದರೆ ಇತ್ತೀಚೆಗೆ ನಗರ ನಿವಾಸಿಗಳು, ಬಹು ರಾಷ್ಟ್ರೀಯ ಕಂಪನಿಗಳ ಉದ್ಯೋಗಿಗಳು ಇಂತಹ ದಿನಾಚರಣೆಗಳತ್ತ ಮನಸ್ಸು ಮಾಡುವುದಿದೆ. ಇದರ ಪರಿಣಾಮವಾಗಿ ಜನಪ್ರಿಯ ಹಾಡುಗಳು ರಚನೆಯಾಗಿವೆ. ಇದರಲ್ಲಿ ಅತಿ ಹೆಚ್ಚು ವೈರಲ್ ಆದ ಹಾಡು 'ಅಪ್ಪ ಯಾಕೋ ಹಿಂದುಳಿದೇ ಬಿಟ್ಟ.. ಹಿಂದುಳಿಯಲು ಕಾರಣ ಅವರೇ ನಮ್ಮೆಲ್ಲರ ಬೆನ್ನೆಲುಬು ನಮ್ಮನ್ನೆಲ್ಲ ಬೆಟ್ಟದಂತೆ ನಿಲ್ಲಿಸಿರುವುದದೇ ಬೆನ್ನೆಲುಬು' ಕವನದ ಸಾಲುಗಳು ಅಪ್ಪನ ಔದಾರ್ಯಗಳನ್ನು ಆಪ್ತವಾಗಿ ತೆರೆದಿಡುತ್ತದೆ. ಆದರೆ ಈ ಪ್ರಯತ್ನಗಳು ಇಷ್ಟಕ್ಕೆ ನಿಲ್ಲದೆ ಕೃತಿಕಾರರ ಮೇಲೂ ಗಾಢ ಪ್ರಭಾವ ಬೀರಿದ ಪರಿಣಾಮವಾಗಿ ಅಪ್ಪನನ್ನು ಕೇಂದ್ರವಾಗುಳ್ಳ ಕೃತಿಗಳೂ ಹೊರಬಂದಿವೆ. ವಿ.ಆರ್. ಮಣಿಕಾಂತ್‌ರ 'ಅಪ್ಪ ಅಂದ್ರೆ ಆಕಾಶ', ರಂಗಸ್ವಾಮಿ ಮೂಕನಹಳ್ಳಿಯವರ 'ಅಪ್ಪನ ಹಾದಿ' ಮುಂತಾದವುಗಳು. ಡಾ. ರಾಜಶೇಂರ್ ಜಮದಂಡಿಯವರ 'ಅಪ್ಪನ ಹೆಗಲು' ಇವುಗಳಲ್ಲಿ ನಾಡಿನ ಹೆಸರಾಂತ ಲೇಖಕರು ಮತ್ತು ಉದಯೋನ್ಮುಖರೂ ಸೇರಿದಂತೆ ಅವರ ತಂದೆಯವರ ಬಗ್ಗೆ ತಳೆದಿದ್ದ ಅಭಿಪ್ರಾಯಗಳ ನ್ನೊಳಗೊಂಡ 111 ಲೇಖನಗಳ ಸಂಕಲನ. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ಪರಿಶ್ರಮ ಅದೂ ಅಪ್ಪನ ಸಂಸ್ಮರಣೆ ಬಗೆಗಿನ ಬರವಣಿಗೆಗಳು ಕಾಣಸಿಗುವುದು ಇದೇ ಮೊದಲು.



ಡಾ. ಗಿರಿಜಾಪತಿ ಎನ್.ಎಂ.
ಮೈಸೂರು ಮೊ: 9844582238

Scan For Digital Colourful
HAMPI TIMES E-paper

ಡಾ. ರಾಜಶೇಖರ ಜಮದಂಡಿ ವಿಜಯನಗರ ಜಿಲ್ಲೆಯ ಹೊಸಪೇಟೆಯವರು, ಎಂ.ಎ ಎಂ.ಫಿಲ್ ಮತ್ತು ಪಿಎಚ್‌ಡಿ ಪದವಿಧ ರರು. ಪತ್ರಿಕಾ ಕ್ಷೇತ್ರ, ಆಕಾಶವಾಣಿಯ ಉದ್ಘೋಷಕರ ಹುದ್ದೆ, ಜನಪದ ವಿಶ್ವವಿದ್ಯಾಲಯದ ಪ್ರಾದೇಶಿಕ ಕೇಂದ್ರಗಳಲ್ಲಿನ ಪ್ರಮುಖ ಜವಾಬ್ದಾರಿಯ ನಿರ್ವಹಣೆ, ಬಳ್ಳಾರಿಯ ಶ್ರೀಕೃಷ್ಣ ದೇವರಾಯ ವಿಶ್ವವಿದ್ಯಾಲಯದ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿನ ಅಧ್ಯಾಪನಾ ವೃತ್ತಿ, ಮೈಸೂರಿನ ಕನ್ನಡ ಶಾಸ್ತ್ರೀಯ ಅಧ್ಯಯನ ಕೇಂದ್ರದಲ್ಲಿ ಹಿರಿಯ ಸಂಶೋಧಕ, ಮಂಗಳೂರಿನ ಖಾಸಗಿ ವಿಶ್ವವಿದ್ಯಾಲಯದಲ್ಲಿ ಸಂದರ್ಶ ಪ್ರಾಧ್ಯಾಪಕ ಮತ್ತು ಸಂಶೋಧನಾ ಮಾರ್ಗದರ್ಶಕರಾಗಿ ತಮ್ಮ ಬಾಳಿಗೆ ಹೆಗಲುಕೊಟ್ಟುಕೊಂಡವರು. ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ 30ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿದ್ದಾರೆ. ನಾಡಿನ ಹತ್ತಾರು ಸಂಘಸಂಸ್ಥೆಗಳಿಂದ ಗೌರವಗಳಿಗೆ ಭಾಜನರಾಗಿದ್ದಾರೆ. ಇತ್ತೀಚೆಗೆ ಅಗಲಿದ ಇವರ ತಂದೆ ದಿ. ಬಸವರಾಜಪ್ಪನವರ ಅನನ್ಯ ಪ್ರೀತಿಯ ನೆನಪುಗಳು ಮತ್ತೆ ಆ ನೆನಪುಗಳ ದಾಖಲೆಗೆಂಬಂತೆ ಸಂಕಲಿಸಿದ 650ಕ್ಕೂ ಹೆಚ್ಚು ಪುಟಗಳ ಬೃಹತ್ ಕೃತಿ 'ಅಪ್ಪನ ಹೆಗಲು' ಓದುಗರ ಕೈಸೇರಿದೆ.




ನಾಡಿನ ಹಿರಿಯ ವಿದ್ವಾಂಸರಾದ ಗೊ.ರೂ. ಚೆನ್ನಬಸಪ್ಪನವರ ನನ್ನ ಮೊದಲ ಗುರುವೇ ನನ್ನ ತಂದೆ ಲೇಖನದಿಂದ ಕೃತಿಯಲ್ಲಿ ಅಪ್ಪಂದಿರ ದರ್ಶನ ಆರಂಭವಾಗುತ್ತದೆ. ನೂರು ಶಿಕ್ಷಕರಿಗಿಂತ ಮಿಗಿಲು ನನ್ನಪ್ಪ ಎನ್ನುವಲ್ಲಿನ ತಾರಾನಾಥರ ಆಚಾರ್ಯರಾಗಿದ್ದ ತಂದೆ, ಜಗದೀಶ್ ಕೊಪ್ಪ ಇವರ ಅಪ್ಪನೆಂಬ ಬುದ್ಧನಲ್ಲಿನ ಮಾಗಿದ ಅಪ್ಪನ ನೋಟ, ಡಾ. ಜಯಪ್ರಕಾಶ್ ಶೆಟ್ಟಿಯವರ ಬೆಂಕಿಯಾಗದಂತೆ ಬೆಳಕು ಕಾದ ನನ್ನಪ್ಪ, ನೆನಪಿನ ನಂದಾದೀಪವಾಗಿ ಕಾಣುವ ಡಾ. ತಾಳ್ತಂಜೆ ವಸಂತಕುಮಾರರ ಭಾವದ ವಲ್ಲರಿ, ಎಚ್. ಎಸ್.ಶಿವಪ್ರಕಾಶರ ಮಹಾನಂದಿಯಾಗುವ ತಂದೆ, ಗಂಗಾವತಿ ಪ್ರಾಣೇಶರ ಯಶಸ್ಸಿನ ಅಪ್ಪ, ಡಾ. ಅಮರೇಶ್ ನುಗಡೋಣಿಯವರ ಅಪ್ಪನಿಂದ ವಿದ್ಯಾವಂತ ನಾದೆ ಎಂಬ ಧನ್ಯತೆ, ಡಾ.ವೈ.ಸಿ. ಭಾನುಮತಿ ಇವರ ಕುಟುಂಬ ವತ್ಸಲ ಸಿದ್ಧರಾಮ ಬೇಲ್ದಾಳ ಶರಣರ ತ್ಯಾಗಮೂರ್ತಿ ತಂದೆ, ಡಾ. ಮಲ್ಲಿಕಾಘಂಟಿಯವರ ಅಪ್ಪನೆಂದರೆ ಎನ್ನುವಲ್ಲಿನ ಕುತೂಹಲ, ಸಿಪಿಕೆಯವರ ತಂದೆಗೆ ಎನ್ನುವಲ್ಲಿನ ಅಚ್ಚರಿ, ತಂದೆಯ ಸದಾಚಾರ ಮಕ್ಕಳಿಗೆ ಎಂಬ ಡಾ. ಜಯಶ್ರೀ ವೀರಣ್ಣ ದಂಡೆ, ಡಾ. ರಾಜಶೇಖರಪ್ಪನವರ ನೆನಪಿನ ಪರದೆಯಲ್ಲಿ, ದುಂಡಿರಾಜರ ಸ್ಥಿತ ಪ್ರಜ್ಞೆ ಕಲಿಸಿದ ಅಪ್ಪ, ಮತ್ತು ನನಗೆ ಅರಿವು ಮೂಡದ ಮುನ್ನವೆ ನಮ್ಮೀ ಲೋಕದಿಂದ ಮರೆಯಾದ ಅಪ್ಪನ ಬಗ್ಗೆ ನಾನು ಬರೆದ ಲೇಖನ 'ಅರ್ಥವಾಗದ ಅಪ್ಪ' ಹೀಗೆ ಅಪ್ಪಂದಿರ ಬಹುರೂಪಗಳಿವೆ. ಈ ಬಹುರೂಪಗಳಲ್ಲೆಲ್ಲ ಅವರ ಅನನ್ಯತೆಯ ಪ್ರೀತಿಯ ಭಾವೋತ್ಕಟತೆಗಳಿವೆ, ಜೀವನದ ಹಾದಿಯನ್ನು ತೆರೆದಿಟ್ಟ ಕ್ಷಣಗಳ ಜೀವಂತಿಕೆಗಳಿವೆ.

ನಾಡಿನ ಹಿರಿಯ ವಿದ್ವಾಂಸರಾದ ವಾಸುದೇವ ನಾಡಿಗರು ಅಪ್ಪ ಎಂಬ ರೂಪಕದ ಬೆನ್ನು ಹತ್ತಿ ಎನ್ನುವ ಮುನ್ನುಡಿ ಇಡೀ ಕೃತಿಯ ಒಟ್ಟಂದವನ್ನು ಹೆಚ್ಚಿಸಿದೆ. ಆತ್ಮ ಸಂಯಮದ ಸೋನೆಯಾಗಿ ಕಂಡ ಪ್ರತಿಯೊಂದು ಲೇಖನಗಳು ಜೀವದ ಜಾತ್ರೆಯಲ್ಲಿ ಅಪ್ಪನ ಹೆಗಲು ಮತ್ತು ಅಮ್ಮನ ಬೆರಳು ನಿರಂತರವಾದ ಚಿತ್ರದಂತಿವೆ. ಹುಟ್ಟಿಗೆ ಕಾರಣವಾಗುವ ಜೀವವೊಂದು ಬಾಳುವುದಕ್ಕೂ ಕಾರಣವಾಗುವ ಪ್ರೇರಕ ಶಕ್ತಿಯಾಗುವುದು ಇಲ್ಲಿನ ಮೂಲಸ್ರೋತ, ಅಪ್ಪ ಯಾವತ್ತೂ ಕಾಡಿಸುವ ರೂಪಕ ಅಮ್ಮ ಯಾವತ್ತೂ ಪ್ರೀತಿಸುವ ಉಪಮೆ ಗುರುತಿಸಿದ್ದಾರೆ. ಕೃತಿಯನ್ನ ಸ್ವತಃ ಸಂಪಾದಕರು ಬಸವ ಪ್ರಕಾಶನ ಹೆಸರಿನಲ್ಲಿ ಪ್ರಕಟಗೊಂಡಿದೆ. ಪ್ರಕಟಗೊಂಡ ಆರೇ ತಿಂಗಳಲ್ಲಿ ಎರಡನೆ ಮುದ್ರಣವನ್ನು ಕಂಡಿರುವುದು ಕೃತಿಯ ಜನಪ್ರಿಯತೆಗೆ ಸಾಕ್ಷಿಯಾಗಿದೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No. 15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಕೂಡಿ ಬಾಳಿದರೆ ಸ್ವರ್ಗಸುಖ

ಬಹುದಿನಗಳಿಂದ ಕಾಡುತಿದೆ
ನನಗೆ ಒಂದು ಪ್ರಶ್ನೆ
ಯಾವ ಧರ್ಮದಲ್ಲಿ ಹೇಳಿದೆ
ಮನುಷ್ಯರೇ ಮನುಷ್ಯರನ್ನು ಸಾಯಿಸಿ
ಎಂದು..?

ನಮ್ಮ ನಡುವೆಯೂ ಇದ್ದಾರೆ
ನಾಲಗೆಯಲ್ಲಿ ಬಾಂಬು ಇಟ್ಟುಕೊಂಡವರು
ಅವರ ಆರ್ಭಟಕ್ಕೆ
ಬಲಿಯಾಗುತ್ತಿದ್ದಾರೆ ಏನೂ ಅರಿಯದವರು

ಈಶ್ವರ, ಅಲ್ಲಾ, ಏಸು ಎಲ್ಲಾ
ಬೇರೆ ಬೇರೆ ಅಲ್ಲ
ಒಂದೇ ಎಲ್ಲರೂ,
ತಿಳಿದರೂ,
ಅವರು ಇವರಿಗೆ
ಇವರು ಅವರಿಗೆ
ಕತ್ತಿ ಮಸೆಯುತಿಹರು..

ಅಂತವರು ಕೇಳಿಕೊಳ್ಳಬೇಕು ಒಮ್ಮೆ
ಅವರ ಮನಸ್ಸನಿಂದು,
ಇನ್ನೊಬ್ಬರನ್ನು ಸಾಯಿಸಿದರೆ
ಸಿಗುವುದಾದರೂ ಏನೆಂದು..?

ಜಗತ್ತಿಗೇ ಶಾಂತಿ ಸಾರಿದ
ಪುಣ್ಯಭೂಮಿ ನಮ್ಮ ನಾಡು..
ಆದರೆ,
ಈಗ ಆಗುತ್ತಿದೆ ಅಶಾಂತಿಯ ಬೀಡು,
ಕೋಮು ಗಲಭೆ ಸೃಷ್ಟಿಸುತ್ತಿದ್ದಾರೆ
ಗೋಮುಖ ವ್ಯಾಘ್ರರು,
ಅವರ ಮಾತು ಕೇಳಿ
ಮೋಸ ಹೋಗುತಿರುವರು ಜನರು

ಎಲ್ಲರೂ ಕೂಡಿ ಬಾಳಿದರೆ
ಸ್ವರ್ಗಸುಖ,
ಅದನ್ನು ಮರೆತರೆ ಕಾಣಬೇಕು
ಇಲ್ಲಿಯೇ ನರಕ...

– ಇಮು, ಹುಬ್ಬಳ್ಳಿ.

---

ನಂಜುಂಡಪ್ಪ ವರದಿ ಅನ್ವಯ ಅನುದಾನದಲ್ಲಿ ಹೆಚ್.ಬಿ.ಹಳ್ಳಿ ಕ್ಷೇತ್ರಕ್ಕೆ ತಾರತಮ್ಯ । ಹೊಸ ತಾಲೂಕಗಳ ಅಭಿವೃದ್ಧಿಗೆ ಸಿದ್ದಗೊಂಡ ಗೋವಿಂದರಾಜ್ ವರದಿ ಸಿಎಂ ಶೀಘ್ರ ಜಾರಿಗೊಳಿಸಲು ಶಾಸಕ ನೇಮಿರಾಜ್ ನಾಯ್ಕ್ ಆಗ್ರಹ.
ದೇವಸ್ಥಾನದ ಅಭಿವೃದ್ದಿಗಳಲ್ಲಿ ಕಿಂಚಿತ್ತು ಕಳಪೆ ನಡೆಯಕೂಡದು । ನಿರ್ಮಿತಿ ಅಧಿಕಾರಿಗೆ ಖಡಕ್ ಸೂಚನೆ.

# ಕೊಟ್ಟೂರೇಶ್ವರ ದೇವಸ್ಥಾನಕ್ಕೆ ಬೆಳ್ಳಿ ಬಾಗಿಲು, ಸಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ




ಕೋಟಿ ಕೋಟಿ ಹಣ ಕರುಣಿಸುವ ಶ್ರೀ ಕೊಟ್ಟೂರೇಶ್ವರಗಿಲ್ಲ ಬೆಳ್ಳಿ ಬಾಗಿಲು

■ ಹಂಪಿ ಟೈಮ್ಸ್ ಕೊಟ್ಟೂರು.
ನಂಜುಂಡಪ್ಪ ವರದಿ ಅನ್ವಯ ಈಭಾಗಕ್ಕೆ ಸಲ್ಲಬೇಕಾದ ಅನುದಾನದಲ್ಲಿ ಹೆಚ್.ಬಿ ಹಳ್ಳಿ ಕ್ಷೇತ್ರಕ್ಕೆ ಸಲ್ಲದೆ ತಾರತಮ್ಯ ಆಗಿದೆ ಈ ಹಿನ್ನೆಲೆ ಹೊಸ ತಾಲೂಕಗಳ ಅಭಿವೃಧ್ಧಿಗೆ ಸಿದ್ದವಾದ ಗೋವಿಂದ ರಾಜ್ ವರದಿಯನ್ನು ಮುಖ್ಯಮಂತ್ರಿಗಳು ವಿಳಂಭ ಮಾಡದೆ ಜಾರಿಗೊಳಿಸುವಂತೆ ಸದನದಲ್ಲಿ ಪ್ರಸ್ತಾಪಿಸಿರುವೆ, ಇದನ್ನು ಶೀಘ್ರ ಜಾರಿ ಮಾಡುವಂತೆ ಈ ಮೂಲಕ ಆಗ್ರಹಿಸುವೆ ಎಂದು ಶಾಸಕ ಕೆ.ನೇಮಿರಾಜ ನಾಯ್ಕ್ ಹೇಳಿದರು.

ಪಟ್ಟಣದ ಶ್ರೀ ಕೊಟ್ಟೂರೇಶ್ವರ ಸ್ವಾಮಿ ದೇವಸ್ಥಾನದ ಬಲ ಭಾಗ 83.50 ಲಕ್ಷ ರೂ. ವೆಚ್ಚದಲ್ಲಿ ಭಕ್ತರಿಗೆ ನೆರಳಿನ ಮೇಲ್ಛಾವಣಿಯ ಶಂಕುಸ್ಥಾಪನೆ, 1.11ಕೋಟಿ ವೆಚ್ಚದಲ್ಲಿ ದೇವಸ್ಥಾನದ ಬೆಳ್ಳಿ ಬಾಗಿಲು ನಿರ್ಮಾಣ ಹಾಗೂ ತೆರು ಬಯಲು ಜಾಗದಲ್ಲಿ 2 ಕೋಟಿ ರೂ. ವೆಚ್ಚದ ಸಿಸಿ ರಸ್ತೆ ನಿರ್ಮಾಣಕ್ಕೆ ಚಾಲನೆ ನೀಡಿ ಮಾತನಾಡಿದರು. ಶ್ರೀಸ್ವಾಮಿಯ ರಥೋತ್ಸವದೊಳಗೆ ಇಂದು ಚಾಲನೆ ಪಡೆದ ಕಾರ್ಯಗಳನ್ನು ಪೂರ್ಣಗೊಳ್ಳಿಸಲು ಶೀಘ್ರ ಕಾರ್ಯಕ್ಕೆ ಮುಂದಾಗುವಂತೆ ನಿರ್ಮಿತಿ ಕೇಂದ್ರದ ಎಇಇ ಅವರಿಗೆ ಸೂಚಿಸಿದರು ಹಾಗೆ ತೇರು ಬಯಲು ಪ್ರದೇಶದಲ್ಲಿರುವ ಶೆಡ್‌ಗಳನ್ನ ತೆಗಿಸುವಂತೆ ಪಪಂ ಮುಖ್ಯಾಧಿಕಾರಿ ಎ.ನಸುರುಲ್ಲಾ ಅವರಿಗೆ ಸೂಚಿಸಿದರು.

ದೇವಸ್ಥಾನಕ್ಕೆ ಬರುವ ಭಕ್ತರಿಗೆ ಅನುಕೂಲಕ್ಕೆ ಇಟಿಗಿ ರಸ್ತೆಯಲ್ಲಿರುವ 1.50 ಎಕರೆಯಲ್ಲಿ 1 ಕೋಟಿ ರೂ.ವೆಚ್ಚದಲ್ಲಿ ಸಮುದಾಯ ಭವನ ಹಾಗೂ ಗೋ ಶಾಲೆ ನಿರ್ಮಾಣ ಮಾಡುವುದಾಗಿ ಹಾಗೂ 100 ಬೆಡ್ ಆಸ್ಪತ್ರೆ , ನೂತನ ಬಸ್‌ಸ್ಟ್ಯಾಂಡ್ ನಿರ್ಮಾಣಕ್ಕೆ ಸ್ಥಳ ವೀಕ್ಷಿಸಿ ನಿರ್ಮಾಣಕ್ಕೆ ಮುಂದಾಗುವ ಬಗ್ಗೆ ಪ್ರಸ್ತಾಪಿಸಿದರು. ತೇರು ಬಯಲು ಪ್ರದೇಶ ಶ್ರೀಸ್ವಾಮಿ ಸಾಗುವ ಪ್ರದೇಶ ಇಲ್ಲಿ ಮಾಂಸ, ಕಸಾಯಿಕಾನಿಯಂತ ವ್ಯಾಪಾರಗಳು ನಡೆಯುವುದು ಧಾರ್ಮಿಕವಾಗಿ ಸೂಕ್ತವಲ್ಲ ಈ ಹಿನ್ನೆಲೆ ಯಾರು ಅನ್ಯತ ಭಾವಿಸದೆ ಇಲ್ಲಿನ ಮಾರಾಟಗಾರರಿಗೆ ಹಾಗೂ ತರಕಾರಿ ಮಾರುಕಟ್ಟೆಗೆ ಊರ ಹೊರಗೆ ಪ್ರತ್ಯೇಕ ಅವಕಾಶ ಕಲ್ಪಿಸಿಕೊಡಲಾಗುವುದು ಎಂದರು.

ಮಿನಿ ವಿಧಾನಸೌಧ ಹಾಗೂ ತಾಲೂಕು ಕೇಂದ್ರಕ್ಕೆ ಬೇಕಾಗಿರುವ ಅವಶ್ಯಕ ಕಚೇರಿಗಳ ನಿರ್ಮಾಣದ ಬಗ್ಗೆ, ಪಟ್ಟಣದ ಸುತ್ತಮುತ್ತಲಿನ ರಸ್ತೆಗಳ ಅಭಿವೃದ್ಧಿ ಬಗ್ಗೆ ಭರವಸೆ ನೀಡಿ, ಪಟ್ಟಣದಲ್ಲಿ 10 ವರ್ಷಗಳಲ್ಲಿ ನಿರ್ಲಕ್ಷ್ಯಕ್ಕೊಳಗಾದಂತಹ ಎಲ್ಲಾ ಅಭಿವೃದ್ಧಿಗಳನ್ನು ನಿಗದಿತ ಅವಧಿಯೊಳಗೆ ಕೈಗೊಳ್ಳುವುದಾಗಿ ವಾಗ್ದಾನ ಮಾಡಿದರು.

ಶಂಕುಸ್ಥಾಪನೆ ವೇಳೆ ತಶಿಲ್ದಾರ ಅಮರೇಶ್ ಜಿ.ಕೆ, ಮುಖಂಡರು ಎಂಎಂಜೆ ಹರ್ಷವರ್ಧನ್, ಧರ್ಮಕರ್ತರು ಎಂ.ಕೆ ಶೇಖರಯ್ಯ, ಪಪಂ ಅಧ್ಯಕ್ಷೆ ಬದ್ದಿ ರೇಖಾ ರಮೇಶ್, ದತ್ತಿ ಇಲಾಖೆ ಇಒ ಹನುಮಂತಪ್ಪ, ಪಪಂ ಮುಖ್ಯಾಧಿಕಾರಿ ಎ.ನಸುರುಲ್ಲಾ ತಾಪಂ ಎಡಿ ವಿಜಯ ಕುಮಾರ, ನಿರ್ಮಿತಿ ಕೇಂದ್ರದ ಎಇಇ ಮಧು ಸೂದನ್, ಪಪಂ ಸದಸ್ಯರಾದ ಶಿವಾನಂದ ಬಾವಿಕಟ್ಟಿ, ಮೊರಬದ ಕೊಟ್ರೇಶ್, ವಿದ್ಯಾಶ್ರೀ ಮೇಘರಾಜ್, ಕೆಂಗರಾಜ್ ಎಪಿಎಂಸಿ ಮಾಜಿ ಅಧ್ಯಕ್ಷ ಬೂದಿ ಶಿವಕುಮಾರ ಸೇರಿದಂತೆ ಸಮಸ್ತ ಕಟ್ಟಿ ಮನಿ ದೈವಸ್ಥರು ಮುಖಂಡರು ಹಾಜರಿದ್ದರು.

---

## ಅಮಿತ್ ಶಾ ಹೇಳಿಕೆ ಖಂಡಿಸಿ ಆಕ್ರೋಶ




■ ಹಂಪಿ ಟೈಮ್ಸ್ ಹೊಸಪೇಟೆ
ನಗರದ ಸಂವಿಧಾನ ಸಂರಕ್ಷಣಾ ಸಮಿತಿ, ದಲಿತ ಮತ್ತು ಪ್ರಗತಿಪರ ಸಂಘಟನೆಗಳ ಒಕ್ಕೂಟದ ನೇತೃತ್ವದಲ್ಲಿ ಸಂವಿಧಾನ ಶಿಲ್ಪಿ ಬಾಬಾ ಸಾಹೇಬ್ ಬಿ.ಆರ್.ಅಂಬೇಡ್ಕರ್ ಇವರ ಬಗ್ಗೆ ಹಗುರವಾಗಿ ಹಾಗೂ ಅವಮಾನಿಸಿ ಮಾತನಾಡಿದ ಕೇಂದ್ರ ಗೃಹ ಸಚಿವ ಅಮಿತ್ ಶಾ ಇವರ ಹೇಳಿಕೆಯನ್ನು ಖಂಡಿಸಿ ನಗರದ ಅಂಬೇಡ್ಕರ್ ವೃತ್ತದಲ್ಲಿ ಅವರ ಆಕ್ರೋಶ ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಮುಖಂಡರಾದ ಮರಡಿ ಜಂಬಯ್ಯ ನಾಯಕ ತಾಯಪ್ಪ ನಾಯಕ ಬಣ್ಣದ ಮನೆ ಸೋಮಶೇಖರ್, ಎನ್ ವೆಂಕಟೇಶ್, ಬಿಸಾಟಿ ಮಹೇಶ್ ಸಣ್ಣ ಮಾರಪ್ಪ ಈಡಿಗರ ಮಂಜುನಾಥ ಎಲ್ ಮಂಜುನಾಥ್ ಭಾಸ್ಕರ್ ರೆಡ್ಡಿ ಯಲ್ಲಾಲಿಂಗ ಕೊಳಗಲ್ ಸೂರ್ಯ ನಾರಾಯಣ ಸೇರಿದಂತೆ ಅನೇಕ ಮುಖಂಡರು ಉಪಸ್ಥಿತರಿದ್ದರು

---

## ಗಣಿಬಾಧಿತ ಪ್ರದೇಶದಲ್ಲಿ ತಾಲೂಕಿಗೊಂದು ವೃಕ್ಷೋದ್ಯಾನ: ಸಚಿವ ಈಶ್ವರ ಖಂಡ್ರೆ

■ ಹಂಪಿ ಟೈಮ್ಸ್ ಬಳ್ಳಾರಿ
ಗಣಿಬಾಧಿತ ಪ್ರದೇಶಗಳಲ್ಲಿ ಪರಿಸರದ ಮೇಲಿನ ದುಷ್ಪರಿಣಾಮ ತಗ್ಗಿಸಲು ತಾಲೂಕಿಗೊಂದು ವೃಕ್ಷೋದ್ಯಾನ ನಿರ್ಮಿಸಲು ಕಾರ್ಯ ಯೋಜನೆ ರೂಪಿಸುವಂತೆ ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವ ಈಶ್ವರ ಬಿ.ಖಂಡ್ರೆ ಅವರು ಸೂಚನೆ ನೀಡಿದರು.

ಬಳ್ಳಾರಿಯ ಅರಣ್ಯ ಇಲಾಖೆ ಕಚೇರಿಯಲ್ಲಿ ಶನಿವಾರ ಪ್ರಗತಿ ಪರಿಶೀಲನಾ ಸಭೆ ನಡೆಸಿದ ಅವರು, ಕರ್ನಾಟಕ ಗಣಿ ಪರಿಸರ ಪುನರ್ ಸ್ಥಾಪನೆ ನಿಗಮ (ಕೆ.ಎಂ.ಇ.ಆರ್.ಸಿ) ನಿಧಿ ಬಳಸಿಕೊಂಡು ಜೀವಿ ಪರಿಸ್ಥಿತಿಯ ಮೇಲಾಗಿರುವ ಹಾನಿ ತಗ್ಗಿಸಲು ಕ್ರಿಯಾಯೋಜನೆ ರೂಪಿಸುವಂತೆ ಅಧಿಕಾರಿಗಳಿಗೆ ನಿರ್ದೇಶಿಸಿದರು. ಗಣಿ ಪ್ರದೇಶಗಳಲ್ಲಿ ವನ್ಯಜೀವಿ ಸಂರಕ್ಷಣೆ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವಂತೆ ಹಾಗೂ ವನ್ಯ ಜೀವಿಗಳಿಗೆ ಬೇಸಿಗೆಯಲ್ಲಿ ನೀರುಗುಂಡಿಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ಅವರು ಸೂಚಿಸಿದರು. ಬಳ್ಳಾರಿ ವೃತ್ತದಲ್ಲಿ ಎಷ್ಟು ಸಿ ಪ್ರವರ್ಗದ ಗಣಿಗಳಿವೆ, ಗಣಿ ಕಂಪನಿಗಳಿಗೆ ಪರಿಹಾರಾತ್ಮಕ ಅರಣ್ಯ ಬೆಳೆಸಲು ಎಷ್ಟು ಡಿಗ್ರೇಡೆಡ್ ಅರಣ್ಯ ಭೂಮಿ ನೀಡಲಾಗಿದೆ, ಎಷ್ಟು ಭೂಮಿಯಲ್ಲಿ ಪರಿಹಾರಾತ್ಮಕ ಅರಣ್ಯ ಬೆಳೆಸಲಾಗಿದೆ. ಅರಣ್ಯದಂಚಿನಲ್ಲಿ ಶ್ರೀಗಂಧ, ಬೀಟೆ, ತೇಗ ಮೊದಲಾದ ಬೆಲೆಬಾಳುವ ಮರಗಳ ಜಿಯೋ ಟ್ಯಾಗ್ ಮಾಡಲಾಗಿದೆಯೇ ಎಂಬ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದ ಅಧಿಕಾರಿಗಳನ್ನು ಸಚಿವರು ತರಾಟೆಗೆ ತೆಗೆದುಕೊಂಡರು. ಅರಣ್ಯ ಸಂರಕ್ಷಿಸುವಂತೆಯೂ ಅಧಿಕಾರಿಗಳಿಗೆ ಸೂಚನೆ ನೀಡಿದರು.

---

ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡೋಣ : ಕಾವಲಿ ಶಿವಪ್ಪನಾಯಕ

# ಮಹಿಳೆಯರಿಗೆ ಸುಸಜ್ಜಿತ ಶೌಚಾಲಯ ನಿರ್ಮಿಸಲು ಸದಸ್ಯರು ಒತ್ತಾಯ, ಸಮ್ಮತಿ




■ ಹಂಪಿ ಟೈಮ್ಸ್ ಕೂಡ್ಲಿಗಿ
ಸಾರ್ವಜನಿಕರಿಗೆ ಮೂಲ ಸೌಕರ್ಯಗಳನ್ನು ಒದಗಿಸಲು ಸರ್ವ ಸದಸ್ಯರು ಸಹಕಾರ ನೀಡಬೇಕು ಎಂದು ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ ಹೇಳಿದರು.

ಪಟ್ಟಣದ ಪಪಂ ಸಭಾಂಗಣದಲ್ಲಿ ಶನಿವಾರ ಪ್ರಸಕ್ತ ಸಾಲಿನ ಆಯ, ವ್ಯಯ ಪೂರ್ವಭಾವಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದರು. ಸರ್ಕಾರ ಮಂಜೂರು ಮಾಡುವ ಬಜೆಟ್ ನಲ್ಲಿ ಪಟ್ಟಣದ ಎಲ್ಲಾ 20 ವಾರ್ಡ್‌ಗಳ ಸದಸ್ಯರು ಅಭಿಪ್ರಾಯ ಪಡೆದು ಬೇಕಾದ ಸೌಲಭ್ಯಗಳ ಪಟ್ಟಿ ಮಾಡಿ ಜನರಿಗೆ ಮೂಲ ಸೌಕರ್ಯಗಳನ್ನು ಒದಗಿಸೋಣ. ರಸ್ತೆ, ಚರಂಡಿ, ಶುದ್ಧ ಕುಡಿಯುವ ನೀರು ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಪ್ರಾಮಾಣಿಕ ಪ್ರಯತ್ನ ಮಾಡೋಣ. ಈಗಾಗಲೇ ಶಾಸಕ ಡಾ.ಎನ್.ಟಿ.ಶ್ರೀನಿವಾಸ್ ಅವರು ಸಹ ಸುಂದರ ಹಾಗೂ ಸ್ವಚ್ಚ ಪಟ್ಟಣಕ್ಕೆ ಬೇಕಾದ ಅಗತ್ಯ ಕ್ರಮಗಳು ಹಾಗೂ ಅವಶ್ಯ ಅನುದಾನ ನೀಡಲು ಸಹ ಉತ್ಸುಕರಾಗಿದ್ದು, ಅವರ ವಿಶ್ವಾಸ ಪಡೆದು ಸಾರ್ವಜನಿಕರು ಮೆಚ್ಚುವ ರೀತಿ ಕೆಲಸ ಮಾಡೋಣ ಎಂದು ಸದಸ್ಯರಿಗೆ ಮನವಿ ಮಾಡಿದರು.

ಬಸ್ ಪ್ರಯಾಣಿಕರು ಅದರಲ್ಲೂ ಮಹಿಳಾ ಪ್ರಯಾಣಿಕರಿಗೆ ಸುಸಜ್ಜಿತ ಶೌಚಾಲಯ ಅವಶ್ಯವಿದೆ. ಈ ಬಗ್ಗೆ ಸದಸ್ಯರು ತೀರ್ಮಾನಿಸಿ ಸುಸಜ್ಜಿತ ಶೌಚಾಲಯ ನಿರ್ಮಾಣ ಮಾಡಲು ಸಾರ್ವಜನಿಕರ ಪರವಾಗಿ ಎಸ್.ದುರುಗೇಶ್ ಸಲಹೆ ನೀಡಿದರು. ಇದಕ್ಕೆ ಸಮ್ಮತಿ ವ್ಯಕ್ತ ಪಡಿಸಿದ ಸದಸ್ಯರು ಹಾಗೂ ಅಧ್ಯಕ್ಷ ಪಪಂ ಅಧ್ಯಕ್ಷ ಕಾವಲಿ ಶಿವಪ್ಪನಾಯಕ, ಪಟ್ಟಣದ ಕೆಕೆ ಹಟ್ಟಿ ಹಾಗೂ ಪಟ್ಟಣದ ಕೆಲ ವಾರ್ಡು ಗಳಲ್ಲಿ ಒಳ ಚರಂಡಿ ಹಾಗೂ ಸ್ವಚ್ಚತೆಗೆ ಅಧಿಕಾರಿಗಳು ಕ್ರಮವಹಿಸಿ ಕೆಲಸ ಮಾಡಬೇಕು ಎಂದು ಸೂಚಿಸಿದರು.

ಪಪಂ ಲೆಕ್ಕಿಗ ಎಚ್.ವಿ. ಗುರುಮೂರ್ತಿ ಪ್ರಸಕ್ತ ಸಾಲಿನ ಅಂದಾಜು ಹಂಚಿಕೆಯಾಗುವ ಬಜೆಟ್ ಕುರಿತು ಮಾತನಾಡಿ, ಎಸ್‌ಎಫ್‌ಸಿ ವೇತನ ಅನುದಾನ 2 ಕೋಟಿ 94 ಲಕ್ಷ, ಎಸ್‌ಎಫ್‌ಸಿ ಬೀದಿದೀಪ ವಿದ್ಯುತ್ ಅನುದಾನ 1 ಕೋಟಿ 98 ಲಕ್ಷ, ಎಸ್‌ಎಫ್‌ಸಿ ನೀರು ಸರಬರಾಜು ಸ್ಥಾವರಗಳ ವಿದ್ಯುತ್ ಅನುದಾನ 2 ಕೋಟಿ 89 ಲಕ್ಷ, ಎಸ್‌ಎಫ್‌ಸಿ ಮುಕ್ತ ನಿಧಿ ಅನುದಾನ 91 ಲಕ್ಷ, ಎಸ್‌ಎಫ್‌ಸಿ ಶೇಕಡಾ 17.15 ಎಸ್‌ಸಿಪಿ ಅನುದಾನ 24 ಲಕ್ಷ, ಎಸ್‌ಎಫ್‌ಸಿ ಶೇಕಡಾ 6.95 ಟಿಎಸ್ ಪಿ 12 ಲಕ್ಷ, ಎಸ್‌ಎಫ್‌ಸಿ ಕುಡಿಯುವ ನೀರು ಅನುದಾನ 2.50 ಲಕ್ಷ ಹಾಗೂ 15 ನೇ ಹಣಕಾಸು 2 ಕೋಟಿ 75 ಲಕ್ಷಗಳು ಅಂದಾಜು ಅನುದಾನ ಸರ್ಕಾರದಿಂದ ಹಂಚಿಕೆಯಾಗಬಹುದು ಎಂದು ಬಜೆಟ್ ಮಂಡಿಸಿದರು.


ಸದಸ್ಯರುಗಳು ವಾರ್ಡುಗಳ ಕೆಲ ಸಮಸ್ಯೆಗಳ ಬಗ್ಗೆ ಚರ್ಚಿಸಿ ಮುಖ್ಯಾಧಿಕಾರಿ ಹಾಗೂ ಅಧ್ಯಕ್ಷರ ಗಮನ ಸೆಳೆದರು, ಮುಂದಿನ ದಿನಗಳಲ್ಲಿ ಆ ಎಲ್ಲಾ ಸಮಸ್ಯೆಗಳಿಗೆ ಅವಶ್ಯ ಅನುದಾನ ಒದಗಿಸಿ ಬಗೆಹರಿಸು ವುದಾಗಿ ಪಪಂ ಅಧ್ಯಕ್ಷ ಕಾವಲಿ ಶಿವಪ್ಪ ನಾಯಕ ಹಾಗೂ ಮುಖ್ಯಾಧಿಕಾರಿ ಎಂ.ಕೆ.ಮುಗಳಿ ಭರವಸೆ ನೀಡಿದರು. ಪಪಂ ಉಪಾಧ್ಯಕ್ಷೆ ಲೀಲಾವತಿ ಪ್ರಭಾಕರ ಸೇರಿದಂತೆ ಸದಸ್ಯರು ಸಭೆಯಲ್ಲಿ ಭಾಗವಹಿಸಿದ್ದರು.

---

## ರದ್ದಾದ ರೈಲು ಸಂಚಾರ ಪುನರಾರಂಭಿಸಲು ಬಾಬುಲಾಲ್ ಜೈನ್ ಒತ್ತಾಯ

■ ಹಂಪಿ ಟೈಮ್ಸ್ ಹೊಸಪೇಟೆ
ನೈರುತ್ಯ ವಲಯ ರೈಲು ಬಳಕೆದಾರರ ಹಿರಿಯ ಸಲಹಾ ಸಮಿತಿ ಸದಸ್ಯ ಬಾಬುಲಾಲ್ ಜೈನ್ ಅವರು, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಿಗೆ ಅಗತ್ಯವಿರುವ ಹಲವು ಪ್ರಮುಖ ರೈಲ್ವೇ ಬೇಡಿಕೆಗಳ ಬಗ್ಗೆ ಪ್ರಧಾನ ವ್ಯವಸ್ಥಾಪಕ ಅರವಿಂದ್ ಶ್ರೀವಾಸ್ತವ್ ಅವರ ಜೊತೆ ಶುಕ್ರವಾರ ಸುದೀರ್ಘವಾಗಿ ಚರ್ಚಿಸಿ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿದರು.

ಬೇಡಿಕೆಗಳು: ಇತ್ತೀಚಿಗೆ ರದ್ದಾದ ಬೆಳಗಾವಿ–ಹೈದ್ರಾಬಾದ್–ಮಣಗೂರು ರೈಲನ್ನು ಪುನರ್‌ಆರಂಭಗೊಳಿಸಿ ದಿನವಹಿ ರೈಲಾಗಿ ಖಾಯಂ ಗೊಳಿಸಬೇಕು. ಹೊಸಪೇಟೆ–ಮುಂಬೈ ನಡುವೆ ಸಂಚರಿಸುತ್ತಿರುವ ಗಾಡಿ




ಸಂಖ್ಯೆ : 11139/11140 ಈ ರೈಲಿಗೆ ಆಧುನಿಕ ಸೌಲಭ್ಯವುಳ್ಳ ಪೂರ್ಣಪ್ರಮಾಣದ LHB ಕೋಚ್‌ಗಳನ್ನು ಅಳವಡಿಸಿ, ಪ್ರಯಾಣಿಕರಿಗೆ ಹೆಚ್ಚುವರಿ ಆಸನಗಳ ಕೋಟಾವನ್ನು ನಿಗದಿಪಡಿಸಬೇಕು. ಹೊಸಪೇಟೆ ನಗರದ ಚಿತ್ತವಾಡ್ಗಿ ಪ್ರದೇಶದಲ್ಲಿ ಸುರಕ್ಷತೆ ಮತ್ತು ತಡೆ ರಹಿತ ಸುಗಮ ಸಾರ್ವಜನಿಕರ ಸಂಚಾರಕ್ಕೆ ಅನುಕೂಲವಾಗುವಂತೆ ಮೇಲ್ಸೇತುವೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಬೇಕು. ಹಬ್ಬಗಳು ಹಾಗೂ ಇತರೆ ವಿಶೇಷ ಸಂದರ್ಭದಲ್ಲಿ ಮೈಸೂರು ಮತ್ತು ಬೆಂಗಳೂರಿನಿಂದ ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ ಪ್ರಯಾಣಿಕರಿಗೆ ವಿಶೇಷ ರೈಲುಗಳ ಸಂಚಾರ ವ್ಯವಸ್ಥೆಯನ್ನು ಮಾಡಬೇಕು. ಹಂಪಿ ಎಕ್ಸ್‌ಪ್ರೇಸ್ ಹಾಗೂ ಹೊಸಪೇಟೆ–ಮುಂಬೈ ಗಾಡಿಗಳಲ್ಲಿ ಸಂಚರಿಸುವ ಪ್ರಯಾಣಿಕರಿಗೆ ಸಮರ್ಪಕ ಹೊದಿಕೆ (Bed Roll) ಮತ್ತಿತರ ಮೂಲ ಸೌಕರ್ಯಗಳನ್ನು ಕಲ್ಪಿಸಬೇಕೆಂದು ಆಗ್ರಹಿಸಿದರು. ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ ಸದಸ್ಯರು ಹಾಗೂ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು ಎಂದು ತಿಳಿಸಿದ್ದಾರೆ.

---

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಸಮಾಜ ವಿಜ್ಞಾನ | ನಿನ್ನ ಏಳಿಗೆಗೆ ನೀನೆ ಶಿಲ್ಪಿ

### ಸಮಾಜ ಶಾಸ್ತ್ರ : ಅಧ್ಯಾಯ 24:– ಸಾಮಾಜಿಕ ಸವಾಲುಗಳು

| ಪ್ರಮುಖ ಕಾಯ್ದೆಗಳು | ಜಾರಿಗೆ ಬಂದ ವರ್ಷ |
|---|---|
| ವರದಕ್ಷಿಣೆ ನಿಷೇಧ ಕಾಯ್ದೆ | 1961 |
| ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯಿದೆ | 1986 |
| ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ 'ರಾಷ್ಟ್ರೀಯ ನೀತಿ | 1987 |
| ಪ್ರಸವಪೂರ್ವ ಲಿಂಗ ಪರೀಕ್ಷೆ ಪ್ರತಿಬಂಧಕ ಕಾಯಿದೆ | 1994 |
| ಬಾಲ್ಯ ವಿವಾಹ ನಿಷೇಧ ಕಾಯ್ದೆ | 2006 |
| ಶಿಕ್ಷಣ ಹಕ್ಕು ಕಾಯಿದೆ (RTE) | 2009 |
| ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ | 2012 |
| ಮಕ್ಕಳ ಸಹಾಯವಾಣಿ: 1098 (ದೂರವಾಣಿ) | |

**1.ಮಕ್ಕಳನ್ನು ದುಡಿಮೆಗೆ ತೊಡಗಿಸುವುದು ಕಾನೂನು ಬಾಹಿರ ಎಂದು ಘೋಷಿಸುವ ಸಂವಿಧಾನದ ವಿಧಿ ಯಾವುದು ?**
ಉತ್ತರ: ಸಂವಿಧಾನದ 24ನೇ ವಿಧಿ

**2. ಬಾಲ ಕಾರ್ಮಿಕರು ಎಂದರೆ ಯಾರು?**
ಉತ್ತರ: 14 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಆರ್ಥಿಕ ದುಡಿಮೆ ಮಾಡುತ್ತಿದ್ದರೆ ಅವರನ್ನು ಬಾಲ ಕಾರ್ಮಿಕರು ಎಂದು ಕರೆಯುತ್ತಾರೆ

**3. ಹೆಣ್ಣು ಭ್ರೂಣ ಹತ್ಯೆ ಎಂದರೇನು? (ಜೂನ್ 2020, ಜೂನ್ 2023)**
ಉತ್ತರ: ತಂದೆ–ತಾಯಿಯರಿಗೆ ಬೇಡವಾದ ಹೆಣ್ಣು ಭ್ರೂಣವನ್ನು ಗರ್ಭದಲ್ಲಿಯೇ ಕೊಂದು ಹಾಕುವುದನ್ನು "ಹೆಣ್ಣುಭ್ರೂಣ ಹತ್ಯೆ' ಎನ್ನುತ್ತಾರೆ

**4.ಹೆಣ್ಣು ಶಿಶುಹತ್ಯೆ ಎಂದರೇನು?**
ಉತ್ತರ: ಜನನದ ನಂತರದಲ್ಲಿ ಹೆಣ್ಣು ಮಗುವನ್ನು ಹತ್ಯೆ ಮಾಡುವ ಪದ್ಧತಿಯೇ ಹೆಣ್ಣು ಶಿಶು ಹತ್ಯೆ.

**5.ಭಾರತದ ಸಾಮಾಜಿಕ ಸವಾಲುಗಳನ್ನು ಹೆಸರಿಸಿ.**
ಉತ್ತರ: 1. ಬಾಲ ಕಾರ್ಮಿಕ ಸಮಸ್ಯೆ 2. ಹೆಣ್ಣು ಭ್ರೂಣಹತ್ಯೆ 3. ಬಡತನ, 4. ಬಾಲಾಪರಾಧ, 5. ಬಾಲಕಾರ್ಮಿಕತೆ 6. ಬಾಲ್ಯವಿವಾಹ 7. ಹೆಣ್ಣು ಶಿಶುಹತ್ಯೆ 8. ನಿರುದ್ಯೋಗ, 9. ಭ್ರಷ್ಟಾಚಾರ 10 ವರದಕ್ಷಿಣೆ, 11. ಮಿತಿಮೀರಿದ ಜನಸಂಖ್ಯೆ, 12. ಮಹಿಳೆಯರ ಶೋಷಣೆ ಇತ್ಯಾದಿ

**6. ಬಾಲ ಕಾರ್ಮಿಕ /ಬಾಲ್ಯ ವಿವಾಹಕ್ಕೆ ಕಾರಣಗಳಾವುವು?**
ಉತ್ತರ: 1. ಕಡುಬಡತನ 2.ಅನಕ್ಷರತೆ 3. ಕೌಟುಂಬಿಕ ಕಲಹ, 4. ಕೌಟುಂಬಿಕ ಹಿಂಸೆ 5.ಮಕ್ಕಳ ಅಪಹರಣ 6. ಲಿಂಗ ತಾರತಮ್ಯ 7. ಮಕ್ಕಳ ಸಾಗಾಣಿಕೆ ಮತ್ತು ಮಾರಾಟ. 8. ಕಾನೂನಿನ ಜಾರಿಯ ಕೊರತೆ 9. ಸಾರ್ವಜನಿಕ ಅಸಹಕಾರ

**7. ಬಾಲ ಕಾರ್ಮಿಕ /ಬಾಲ್ಯ ವಿವಾಹದ ಪರಿಣಾಮಗಳಾವವು? (ಜೂನ್ 2024)**
ಉತ್ತರ: ಮಕ್ಕಳ ಎಲ್ಲಾ ಹಕ್ಕುಗಳ ಉಲ್ಲಂಘನೆ
1. ಬಾಲ್ಯತನ, ಮನೋರಂಜನೆ, ಗೆಳೆತನಕ್ಕೆ ಧಕ್ಕೆ.
2. ಅನಾರೋಗ್ಯ, 3. ಅಪೌಷ್ಟಿಕತೆ 4. ಶಿಕ್ಷಣಕ್ಕೆ ಧಕ್ಕೆ, 5. ಹಿಂಸೆ, ದೌರ್ಜನ್ಯ 6. ಆರ್ಥಿಕ ಮತ್ತು ಸಾಮಾಜಿಕ ಶೋಷಣೆ 7. ಗರ್ಭಪಾತ, ಶಿಶುಮರಣ, ತಾಯಿಮರಣ 8. ವಿಧವೆಯಾಗುವ ಸಂಭವ.

**8. ಬಾಲ ಕಾರ್ಮಿಕತೆಯ ನಿರ್ಮೂಲನಾ ಕ್ರಮಗಳಾವವು? ವಿವರಿಸಿ. (ಏಪ್ರಿಲ್ 2024)**
1. ಸಂವಿಧಾನದ 24ನೇ ವಿಧಿ : ಮಕ್ಕಳನ್ನು ದುಡಿಮೆಗೆ ನೇಮಿಸುವುದು ಶಿಕ್ಷಾರ್ಹ ಅಪರಾಧ.
2. ಬಾಲಕಾರ್ಮಿಕ ನಿಷೇಧ ಮತ್ತು ನಿಯಂತ್ರಣ ಕಾಯ್ದೆಯನ್ನು' (1986) ಜಾರಿಗೊಳಿಸಲಾಗಿದೆ.
3. ಬಾಲಮಂದಿರಗಳಲ್ಲಿ ಉಚಿತ ವಸತಿ, ಊಟ ಒದಗಿಸಲಾಗುತ್ತಿದೆ.
4. 'ಕೂಲಿಯಿಂದ ಶಾಲೆಗೆ' ಎಂಬ ಕಾರ್ಯಕ್ರಮದಲ್ಲಿ ಬಾಲಕಾರ್ಮಿಕ ಮಕ್ಕಳಿಗೆ ಶಾಲೆಯಲ್ಲಿ ಉಚಿತ ಶಿಕ್ಷಣ ನೀಡಲಾಗುತ್ತದೆ.
5. "ಶಿಕ್ಷಣಹಕ್ಕು ಕಾಯ್ದೆ 2009" ರಲ್ಲಿ
6 ರಿಂದ 14 ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ಉಚಿತ ಶಿಕ್ಷಣ ನೀಡಲಾಗುತ್ತದೆ.
7. 1987 ರಲ್ಲಿ ಬಾಲ ಕಾರ್ಮಿಕರ ಕಲ್ಯಾಣಕ್ಕಾಗಿ 'ರಾಷ್ಟ್ರೀಯ ನೀತಿ'ಯನ್ನು ಜಾರಿಗೊಳಿಸಲಾಗಿದೆ.

**9. ವರದಕ್ಷಿಣೆ ಪಿಡುಗಿನಿಂದಾಗುವ ದುಷ್ಪರಿಣಾಮಗಳಾವುವು?**
*. ಮಹಿಳೆಯರ ಶೋಷಣೆ, * ಕೊಲೆ ಮತ್ತು ಹಿಂಸೆಗಳಿಗೆ ಅವಕಾಶ. * ಮಹಿಳೆಯರ ಸ್ವಾಭಿಮಾನ, ಗೌರವ, ಸ್ಥಾನಮಾನಕ್ಕೆ ಧಕ್ಕೆ. * ಸ್ತ್ರೀ ಪುರುಷರ ನಡುವೆ ಕಲಹ, * ವಿವಾಹ ವಿಚ್ಛೇದನ, * ಮೋಸದ ವಿವಾಹಗಳ ಸಾಧ್ಯತೆ,. * ಹೆಣ್ಣು ಭ್ರೂಣ ಹತ್ಯೆ ಹಾಗು ಹೆಣ್ಣು ಶಿಶು ಹತ್ಯೆ.

"ಇಂದಿನ ಪರಿಶ್ರಮವೇ ನಾಳಿನ ಯಶಸ್ಸು"

www.hampitimes.com - Hampi Times Margadarshi

ಮಾರ್ಗದರ್ಶಿ ಶಿಕ್ಷಕರು : ಕೊಟ್ರೇಶ್ ಮಾಳಿಗಿ ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

## ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

**22–12–2024 – ಶನಿವಾರ**

| | |
|---|---|
| ತಿಥಿ | : ಸಪ್ತಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಉತ್ತರ/ಫಾಲ್ಗುಣ |
| ಯೋಗ | : ಆಯುಷ್ಮಾನ್ |
| ಕರಣ | : ಭವ |
| ಸೂರ್ಯೋದಯ | : 07:05:37 |
| ಸೂರ್ಯಾಸ್ತ | : 17:45:52 |
| ರಾಹು ಕಾಲ | : 16:26–17:46 |
| ಯಮಘಂಡ ಕಾಲ | : 12:26–13:46 |
| ಗುಳಿಕ ಕಾಲ | : 15:06–16:26 |



## ತುಂಗಭದ್ರಾ ನೀರಿನ ಮಟ್ಟ

**ಶನಿವಾರ : 21–12–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1628.48 ಅಡಿ |
| ಒಳ ಹರಿವು | 780 ಕ್ಯುಸೆಕ್ |
| ಹೊರ ಹರಿವು | 7145 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 88.466 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1589.84 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 894 ಕ್ಯುಸೆಕ್ |
| ಸಾಮರ್ಥ್ಯ | 10.898 ಟಿಎಂಸಿ |

# ಪದವಿ ಯುಗವಲ್ಲ ಜ್ಞಾನ ಕೌಶಲ್ಯದ ಯುಗ

## ಬೆಳಗಾವಿ ವಿಟಿಯು ಪ್ರೊಫೆಸರ್ ಡಾ.ರಾಯನ ಗೌಡ ಅಭಿಮತ । ಪಿಡಿಐಟಿಯಲ್ಲಿ ಪ್ರೌಢ ಸಮ್ಮಿಲನ

■ **ಹಂಪಿ ಟೈಮ್ಸ್ ಹೊಸಪೇಟೆ**

ಇದು ಪದವಿ ಯುಗವಲ್ಲ ಜ್ಞಾನ ಹಾಗೂ ಕೌಶಲ್ಯದ ಯುಗ, ಕಠಿಣ ಪರಿಶ್ರಮ, ಜ್ಞಾನಾರ್ಜನೆ ಹಾಗೂ ಉತ್ತಮ ಕೌಶಲ್ಯವನ್ನು ಹೊಂದಿದರೆ ಈಗಿನ ತಾಂತ್ರಿಕ ಯುಗದಲ್ಲಿ ಮನ್ನಣೆ ಸಿಗುತ್ತದೆ ಕೇವಲ ಪದವಿಯಿಂದಲ್ಲ ಎಂದು ಬೆಳಗಾವಿ ವಿಟಿಯು ಪ್ರೊಫೆಸರ್ ಡಾ.ರಾಯನ ಗೌಡ ಅಭಿಪ್ರಾಯಪಟ್ಟರು.

ನಗರದ ಪ್ರೌಢದೇವರಾಯ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಹಳೆಯ ವಿದ್ಯಾರ್ಥಿಗಳ ಪ್ರೌಢಸಮ್ಮಿಲನದಲ್ಲಿ ಕಾಲೇಜಿನ ಹಳೆಯ ವಿದ್ಯಾರ್ಥಿಯಾಗಿ ಪಾಲ್ಗೊಂಡು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. 1999 ಹಾಗೂ 2003 ರ ಬ್ಯಾಚ್ ನ ಕಂಪ್ಯೂಟರ್ ಸೈನ್ಸ್ ವಿದ್ಯಾರ್ಥಿಯಾಗಿದ್ದು ಅಂದಿನ ಕಾಲೇಜಿನ ನೆನಪುಗಳನ್ನು ಸ್ಮರಿಸಿಕೊಂಡರು.

ವಿದಾರ್ಥಿಗಳು ಭವಿಷ್ಯದಲ್ಲಿ ಉತ್ತಮ ಸಾಧನೆಯನ್ನು ಮಾಡಬೇಕಾದರೆ ಕಠಿಣ ಪರಿಶ್ರಮದಿಂದ ಜ್ಞಾನಾರ್ಜನೆಯನ್ನು ಪಡೆದು ಸಂಶೋಧನಾತ್ಮಕ ಚಟುವಟಿಕೆಗಳಲ್ಲಿ ಭಾಗಿಯಾಗಬೇಕು. ಇತೀಚೀನ ಎಷ್ಟೋ ಸಂಶೋಧನಾತ್ಮಕ ಪ್ರಬಂಧಗಳು, ಅಂಕಪಟ್ಟಿಗಳು ಹಾಗೂ ದಾಖಲೆಗಳು ನಕಲಿಯಾಗಿ ಹೊರಹೊಮ್ಮುತ್ತಿವೆ ಅವುಗಳಿಗೆ ಕಡಿವಾಣ ಹಾಕಲು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವಾವಿದ್ಯಾಲಯ ಎಲೆಕ್ಟ್ರಾನಿಕ್ ಡಾಕ್ಯುಮೆಂಟ್ ಡೆಲಿವರಿ ಮತ್ತು ಟ್ರ್ಯಾಕಿಂಗ್ ಸಿಸ್ಟಮ್ (EDDTS) ಎಂಬ ಹೊಸ ವ್ಯವಸ್ಥೆಯನ್ನು ಕಲ್ಪಿಸಿದೆ. ಇದರಿಂದ ವಿದ್ಯಾರ್ಥಿಗಳು ತಮ್ಮ ದಾಖಲೆಗಳನ್ನು ಪರಿಶೀಲಿಸಬಹುದು ಹಾಗೂ ಈ ವ್ಯವಸ್ಥೆಯ ಮೂಲಕ ಪದವಿ ಪ್ರಮಾಣ ಪತ್ರಗಳನ್ನು ಪಡೆಯಲು ಮನೆಯಿಂದಲೇ ಆನ್ಲೈನ್‌ನಲ್ಲಿ ಅರ್ಜಿಯನ್ನು ಸಲ್ಲಿಸಬಹುದು. ಇದರಿಂದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದ ಕಾರ್ಯಾಲಯಗಳಿಗೆ ಅಲೆಯುವುದು ತಪ್ಪುತ್ತದೆ ಎಂದು ಹೇಳಿದರು.



ಎಷ್ಟೇ ಸಾಧನೆ ಮಾಡಿದರೂ ಸಹ ತಮ್ಮ ಪಾಲಕರ ಜವಾಬ್ದಾರಿಯನ್ನು ಮರೆಯಬಾರದು, ಹೆಚ್ಚು ವೇತನಕ್ಕಾಗಿ ತಂದೆ ತಾಯಿಗಳನ್ನು ಬಿಟ್ಟು ವಿದೇಶಗಳಿಗೆ ವಲಸೆ ಹೋಗುವ ಈ ಯುಗದಲ್ಲಿ ವೇತನ ಮುಖ್ಯವಲ್ಲ ಎಂದು ಅರಿತು ಅವರ ಪೋಷಕರ ಮೊಗದಲ್ಲಿ ಮಂದಹಾಸವನ್ನು ಎಂದು ಕಾಣುತ್ತರೋ ಅದೇ ಅವರ ಯಶಸ್ಸು ಎಂದು ಭಾವಿಸಬೇಕು ಎಂದು ಕಿವಿಮಾತು ಹೇಳಿದರು.

ಕಾಲೇಜಿನ ಹಳೆಯ ಎಂ.ಬಿ.ಎ ವಿದ್ಯಾರ್ಥಿಯಾದ ಶಿರಸಿಯ ಆಸಿಸ್ಟಂಟ್ ಕಮಿಷನರ್ ಆದ ಕಾವ್ಯರಾಣಿ ಕೆ.ವಿ. ಅವರು ಮಾತನಾಡಿ, ಪ್ರೌಢ ಸಮ್ಮಿಲನ ಕಾರ್ಯಕ್ರಮ ನಮ್ಮೆಲ್ಲರಿಗೆ ಒಂದು ಭಾವನಾತ್ಮಕ ದಿನವಾಗಿದೆ, ನಮ್ಮ ಹೆಸರಿನೊಂದಿಗೆ ನಾವು ಓದಿದ ಶಾಲೆ, ಕಾಲೇಜು, ಊರು ಇವುಗಳನ್ನು ಪ್ರತಿನಿಧಿಸುತ್ತೇವೆ, ಆ ಶಾಲಾ ಕಾಲೇಜು, ಊರು ಹಾಗೂ ಸಮಾಜಕ್ಕೆ ನಮ್ಮಿಂದ ಕೊಡುಗೆ ನೀಡಿ ಕೃತಜ್ಞತೆ ಸಲ್ಲಿಸುವುದು ಸಹ ಒಂದು ಜವಾಬ್ದಾರಿಯಾಗಿದೆ ಎಂದು ಹೇಳಿದರು.

ಬಳ್ಳಾರಿ ವೀರಶೈವ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಅಲ್ಲಂ ಗುರುಬಸವರಾಜ್ ಅಧ್ಯಕ್ಷತೆವಹಿಸಿ ಮಾತನಾಡಿ, ವಿಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಒಳ್ಳೆಯ ಸಂಸ್ಕೃತಿಯನ್ನು ಈ ಕಾಲೇಜು ನೀಡಿದೆ ಎಂದು ಹೇಳಿದರು.

ವೀ.ವಿ ಸಂಘದ ಕಾರ್ಯದರ್ಶಿ ಅರವಿಂದ್ ಪಟೇಲ್ ಮಾತನಾಡಿ, ಪರಿಸರದ ಸುಸ್ಥಿರತೆ, ಇಂಧನ ಬಳಕೆ, ಹಾಗೂ ನೈತಿಕತೆ ಈ ಮೂರು ಅಂಶಗಳ ಕೊರತೆಯನ್ನು ಯುವ ಪೀಳಿಗೆ ಅನುಭವಿಸುತ್ತಿದೆ ಇಂಜಿನಿಯರ್ ಗಳು ಈ ನಿಟ್ಟಿನಲ್ಲಿ ಡಿಜಿಟಲ್ ತಾಂತ್ರಿಕತೆಯ ಮೂಲಕ ಅರಿವನ್ನು ಮೂಡಿಸಬೇಕು ಎಂದು ಹೇಳಿದರು.

ಪಿಡಿಐಟಿಯ ಹಳೆಯ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯಾದ ಡಾ.ಸಿಂಧು.ಆರ್, ಕಾರ್ಯಕ್ರಮದ ಉದ್ದೇಶವನ್ನು ತಿಳಿಸಿದರು. ಹಳೆಯ ವಿದ್ಯಾರ್ಥಿಗಳು ತಮ್ಮ ವೃತ್ತಿಪರ ಅನುಭವಗಳನ್ನು ಎಲ್ಲರೊಂದಿಗೆ ಹಂಚಿಕೊಂಡರು. ಸಮಾರಭದಲ್ಲಿ ಅತಿಥಿಗಳಿಗೆ ಸನ್ಮಾನಿಸಲಾಯಿತು.

> ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ ನಮ್ಮಲ್ಲಿ ಹಲವಾರು ಕೌಶಲ್ಯಯುತ ತರಬೇತಿಗಳನ್ನು ಹಮ್ಮಿಕೊಳ್ಳಲಾಗಿದೆ ಕೌಶಲ್ಯಾಭಿವೃದ್ಧಿಗೆ ಹೆಚ್ಚಿನ ಮಹತ್ವವನ್ನು ನೀಡಿದ್ದು, ತರಗತಿಗಳಲ್ಲಿ ಅವುಗಳನ್ನು ಅಳವಡಿಸಲಾಗಿದೆ.
>
> – **ಕರಿಬಸವರಾಜ ಬಾದಾಮಿ**
> ಅಧ್ಯಕ್ಷರು, ಪಿಡಿಐಟಿ ಆಡಳಿತ ಮಂಡಳಿ

> 25 ವರ್ಷಗಳಲ್ಲಿ 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಈ ಕಾಲೇಜಿನಿಂದ ತೇರ್ಗಡೆ ಹೊಂದಿ ಹಲವಾರು ಪ್ರತಿಷ್ಠಿತ ಕಂಪೆನಿಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಳೆಯ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡಿದ್ದೇವೆ.
>
> – **ಡಾ.ಯು.ಎಂ.ರೋಹಿತ್**
> ಪ್ರಾಂಶುಪಾಲರು. ಪಿಡಿಐಟಿ

ಕಾರ್ಯಕ್ರಮದಲ್ಲಿ ವೀ.ವಿ. ಸಂಘದ ಉಪಾಧ್ಯಕ್ಷ ಜಾನೆಕುಂಟೆ ಬಸವರಾಜ್, ಕಾಲೇಜಿನ ಆಡಳಿತ ಮಂಡಳಿ ಸದಸ್ಯರಾದ ಸಂಗನ ಬಸಪ್ಪ ಹಾಗೂ ಅನಿಲ್ ಜವಳಿ ಉಪಸ್ಥಿತರಿದ್ದರು

ವಿವಿಧ ವಿಭಾಗದ ಮುಖ್ಯಸ್ಥರು, ಪ್ರಾಧ್ಯಾಪಕ ವೃಂದ ಸಿಬ್ಬಂದಿ ವರ್ಗ ಹಾಗೂ 300ಕ್ಕೂ ಹೆಚ್ಚು ಹಳೆಯ ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗಿಯಾದರು. ಸಾಂಸ್ಕೃತಿಕ ಕಾರ್ಯಕ್ರಮಗಳು ನೆರವೇರಿದವು. ಹಳೆ ವಿದ್ಯಾರ್ಥಿಗಳು ಸೆಲ್ಫಿಯೊಂದಿಗೆ ಸಂಭ್ರಮಿಸಿದರು.




# ಮಹನೀಯರ ಜಯಂತಿ ಅರ್ಥಪೂರ್ಣ ಆಚರಣೆಗೆ ಆದ್ಯತೆ

## ಡಿ.30 ವಿಶ್ವಮಾನವ ಕುವೆಂಪುರವರ ಜನ್ಮದಿನ । ಜ.01 ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿಯವರ ಸಂಸ್ಮರಣಾ ದಿನ





■ **ಹಂಪಿ ಟೈಮ್ಸ್ ಹೊಸಪೇಟೆ**

ರಾಷ್ಟ್ರಕವಿ ಕುವೆಂಪು ಜನ್ಮದಿನ ಮತ್ತು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿ ಸಂಸ್ಮರಣಾ ದಿನಾಚರಣೆ ಕಾರ್ಯಕ್ರಮವನ್ನು ಜಿಲ್ಲಾಡಳಿತದಿಂದ ಅರ್ಥಪೂರ್ಣವಾಗಿ ಆಚರಣೆಗೆ ಆದ್ಯತೆ ನೀಡಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಇ.ಬಾಲಕೃಷ್ಣಪ್ಪ ಹೇಳಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಶನಿವಾರ ಮಾತನಾಡಿದರು, ಜಿಲ್ಲಾಡಳಿತ, ಜಿಪಂ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಡಿ.30 ರಂದು ವಿಶ್ವಮಾನವ ಸಂದೇಶ ಸಾರಿದ ರಾಷ್ಟ್ರಕವಿ ಕುವೆಂಪುರವರ ಜನ್ಮದಿನವನ್ನು ವಿಶ್ವಮಾನವ ದಿನವನ್ನಾಗಿ ಮತ್ತು ಜ.01 ರಂದು ವಿಶ್ವಕರ್ಮ ಅಮರಶಿಲ್ಪಿ ಜಕಣಾಚಾರಿಯವರ ಸಂಸ್ಮ ರಣಾ ದಿನವನ್ನು ಸರಳವಾಗಿ ಅಚ್ಚುಕಚ್ಚಾಗಿ ಆಚರಿಸಲು ಎಲ್ಲಾ ರೀತಿಯ ಸಿದ್ದತೆಯನ್ನು ನಡೆಸುವಂತೆ ಸೂಚಿಸಿದರು. ಸಮುದಾಯ ದವರು ಮತ್ತು ಸಂಘ ಸಂಸ್ಥೆಗಳ ಮುಖಂಡರು, ಶಾಲಾ ಕಾಲೇಜು ವಿದ್ಯಾರ್ಥಿ ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿ ಗೊಳಿಸುವಂತೆ ತಿಳಿಸಿದರು.

ವಿವಿಧ ಇಲಾಖೆಗಳ ಸರ್ಕಾರಿ ಕಚೇರಿಗಳಲ್ಲಿ ಹಾಗೂ ಶಾಲಾ ಕಾಲೇಜುಗಳಲ್ಲಿ ಮಹನೀ ಯರ ಭಾವಚಿತ್ರವನ್ನಿರಿಸಿ ವಿಶೇಷವಾಗಿ ಸ್ಮರಿಸುವಂತೆ ತಿಳಿಸಿದರು. ಜಯಂತಿ ಯನ್ನು ಜಿಲ್ಲಾಧಿಕಾರಿಗಳ ಸಭಾಂಗಣದಲ್ಲಿ ಆಚರಿ ಸಲು ಸರ್ವಸಿದ್ದತೆಗಳನ್ನು ಕೈಗೊಳ್ಳು ವಂತೆ ಹಾಗೂ ವೇದಿಕೆ ಕಾರ್ಯಕ್ರಮದಲ್ಲಿ ಕುಡಿಯುವ ನೀರು, ಆಸನದ ವ್ಯವಸ್ಥೆ, ಸ್ವಚ್ಛತೆ ಸೇರಿದಂತೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಸಿದ್ದಲಿಂಗಣ್ಣನವರ್, ನಗರಸಭೆ ಪೌರಾಯುಕ್ತ ರಾದ ಚಂದ್ರಪ್ಪ ಉಪಸ್ಥಿತರಿದ್ದರು. ಪೂರ್ವ ಭಾವಿ ಸಭೆಯಲ್ಲಿ ವಿಶ್ವಕರ್ಮ ಸಮುದಾಯದ ಮುಖಂಡರು, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರು ಸೇರಿದಂತೆ ಸಂಘಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.

# ಹಂಪಿ ಮೃಗಾಲಯದ ಆಕರ್ಷಕ ಕ್ಯಾಲೆಂಡರ್ ಬಿಡುಗಡೆ

## ವಿಜಯನಗರದ ಪ್ರಸಿದ್ಧ ಸ್ಥಳಗಳ ಮಾಹಿತಿ । ಮಕ್ಕಳಿಗೆ, ನಿಸರ್ಗ ಪ್ರಿಯರಿಗೆ ಪ್ರಾಣಿ ಪಕ್ಷಿಗಳ ಹೆಚ್ಚಿನ ಮಾಹಿತಿಯೂ ಲಭ್ಯ



■ **ಹಂಪಿ ಟೈಮ್ಸ್ ಹೊಸಪೇಟೆ**

ಹಂಪಿಯ ಶ್ರೀಅಟಲ್ ಬಿಹಾರಿ ವಾಜಪೇಯಿ ಜೂಲಾಜಿಕಲ್ ಪಾರ್ಕ್ ವತಿಯಿಂದ ಸಿದ್ದಪಡಿಸಿದ ನೂತನ ವರ್ಷದ 2025ರ ಕ್ಯಾಲೆಂಡರನ್ನು ಜಿಲ್ಲಾಧಿಕಾರಿ ಎಂ. ಎಸ್.ದಿವಾಕರ್ ಬಿಡುಗಡೆಗೊಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಶನಿವಾರ ಬಿಡುಗಡೆಗೊಳಿಸಿ ಮಾತನಾಡಿ, ನೂತನ ವರ್ಷಕ್ಕೆ ಹಂಪಿ ಮೃಗಾಲಯದಿಂದ ಸಿದ್ದಪಡಿಸಿರುವ ಕ್ಯಾಲೆಂಡರ್ ತುಂಬಾ ಅಕರ್ಷಕವಾಗಿದೆ. ವಿಶೇಷವಾಗಿ ಮೃಗಾಲಯದಲ್ಲಿರುವ ವಿವಿಧ ಪ್ರಾಣಿ–ಪಕ್ಷಿಗಳ ಭಾವಚಿತ್ರ ಸಹಿತ ಅವುಗಳ ಹೆಸರುಗಳು, ವರ್ತನೆ ಹಾಗೂ ವಿಜಯನಗರದ ಪ್ರಸಿದ್ಧ ಸ್ಥಳಗಳ ಮಾಹಿತಿಗಳನ್ನು ಒಳಗೊಂಡಂತೆ ಕ್ಯಾಲೆಂಡರ್‌ನ್ನು ತಯಾರಿಸಲಾಗಿದೆ. ಪ್ರಾಣಿ – ಪಕ್ಷಿ ಪ್ರಿಯರು, ನಿಸರ್ಗ ಪ್ರೇಮಿಗಳನ್ನು ಆಕರ್ಷಿಸುವಂತೆ ಕ್ಯಾಲೆಂಡರ್ ಸಿದ್ದವಾಗಿರುವುದು ಸಂತಸ ಮೂಡಿಸಿದ ಎಂದರು.

ಉಪಅರಣ್ಯ ಸಂರಕ್ಷಣಾಧಿಕಾರಿ ಡಾ. ಎಸ್.ರಾಜೇಶ್ ನಾಯ್ಕ ಮಾತನಾಡಿ, ಹಂಪಿ ಮೃಗಾಲಯದ ಬಗ್ಗೆ ಸಾರ್ವಜನಿಕರಿಗೆ, ಪ್ರವಾಸಿ ವೀಕ್ಷಕರಿಗೆ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಈ ಬಾರಿ ಕ್ಯಾಲೆಂಡರ್ ಸಿದ್ಧಪಡಿಸಲಾಗಿದೆ. ವಿಶೇಷವಾಗಿ ಹಂಪಿ ಮೃಗಾಲಯಕ್ಕೆ ಭೇಟಿ ನೀಡುವ ಪ್ರವಾಸಿ ವೀಕ್ಷಕರಿಗೆ ನೂತನ ವರ್ಷದ ಕ್ಯಾಲೆಂಡರ್ ಕೈಸೇರುವ ವ್ಯವಸ್ಥೆ ಕಲ್ಪಿಸಲಾಗುವುದು. ಕ್ಯಾಲೆಂಡರ್‌ನಲ್ಲಿರುವ ಪ್ರಾಣಿ ಪಕ್ಷಿಗಳ ಮಾಹಿತಿಯಿಂದ ಮಕ್ಕಳಿಗೆ, ನಿಸರ್ಗ ಪ್ರಿಯರಿಗೆ ಹೆಚ್ಚಿನ ಮಾಹಿತಿ ದೊರಕಲಿದೆ ಎಂದರು.

ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೊಂಗ್ಜಾಯ್ ಮಹಮ್ಮದ್ ಅಲಿ ಅಕ್ರಂ ಷಾ ಇದ್ದರು.

